ಗೊಮ್ಮಟೇಶ್ವರ

ಪ್ರೊ॥ ಎಸ್. ಕೆ. ರಾಮಚಂದ್ರ ರಾವ್



ಗೊಮ್ಮಟೇಶ್ವರ

ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ – 249

ಗೊಮ್ಮಟೇಶ್ವರ

ವಿದ್ಯಾಲಂಕಾರ ಪ್ರೊ॥ ಎಸ್. ಕೆ. ರಾಮಚಂದ್ರ ರಾವ್

ಐ ಬಿ ಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು– 560 009

GOMMATESWARA-written in Kannada by Vidyalankara Prof. S.K. Ramachandra Rao. Published by P. N. Kamat, I B H Prakashana, Fifth Main Road, Gandhinagar, Bangalore-560 009

© The Publishers, 1975

ಬೆಲೆ : ರೂ. 1–50

*

© ಸರ್ವಸ್ವಾಮ್ಯ : ಪ್ರಕಾಶಕರದು

*

ಮುಖಪುಟ : ಬಿ. ಕೇಸರ್ ಸಿಂಗ್

*

ಮೊದಲನೆಯ ಮುದ್ರಣ : 1975. ಪ್ರಕಾಶಕರು : ಪಿ. ಎನ್. ಕಾಮತ್, ಐ ಬಿ ಎಚ್ ಪ್ರಕಾಶನ, ಐದನೆಯ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು – 560 009. ಮುದ್ರಕರು : ಎಚ್. ಎಸ್. ಎನ್. ರಾವ್, ಐ ಬಿ ಎಚ್ ಪ್ರಕಾಶನ ಪ್ರಿಂಟರಿ, ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು – 560 054

*

ಅಧಿಕೃತ ಮಾರಾಟಗಾರರು :

ಇಂಡಿಯಾ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು – 560 009

Paper used for printing this book was made available by Government of India at concessional rate **for 3,000 copies only.**

ಗೊಮ್ಮಟಸ್ತುತಿ

ಶ್ರವಣಬೆಳ್ಗೊಳ ಈಗ ನಮ್ಮ ರಾಜ್ಯದಲ್ಲಿ ಹಾಸನ ಜಿಲ್ಲೆಗೆ ಸೇರಿರುವ ಸಣ್ಣ ಊರು, ಚನ್ನರಾಯಪಟ್ಟಣದ ಬಳಿಯಿದೆ. ಆದರೆ ಅದು ಪ್ರಪಂಚದಲ್ಲೆಲ್ಲ ಪ್ರಖ್ಯಾತವಾಗಿದೆ. ಏಕೆ ಗೊತ್ತೆ? ಅಲ್ಲಿ ದೊಡ್ಡ ಬೆಟ್ಟದ ಮೇಲಿರುವ ಗೊಮ್ಮಟೇಶ್ವರನ ದೊಡ್ಡ ಶಿಲಾಮೂರ್ತಿಯಿಂದಾಗಿ. ಅಷ್ಟು ದೊಡ್ಡದಾದ, ಅಷ್ಟು ಚೆನ್ನಾಗಿರುವ ಕಲ್ಲಿನ ಮೂರ್ತಿಗಳು ಜಗತ್ತಿನಲ್ಲಿಯೇ ಅಪರೂಪ. ಅದನ್ನು ನೋಡಿದವರೆಲ್ಲ ಬೆರಗಾಗುತ್ತಾರೆ, ತಲೆದೂಗುತ್ತಾರೆ, ಅಂಥದನ್ನು ಹಿಂದೆಂದೂ ಕಂಡಿಲ್ಲವೆನ್ನುತ್ತಾರೆ. ದೇಶವಿದೇಶಗಳಿಂದೆಲ್ಲ ಜನ ಬಂದು ಇದನ್ನು ನೋಡಿಹೋಗುತ್ತಾರೆ. ನಮ್ಮ ರಾಜ್ಯ ಜಗತ್ಪ್ರಸಿದ್ಧವಾಗಿರುವುದಕ್ಕೆ ಈ ಮೂರ್ತಿಯೂ ಒಂದು ಕಾರಣ.

ಈ ಮೂರ್ತಿ ಮೈತಳೆದದ್ದು ಕ್ರಿಸ್ತಾಬ್ದ 968ರ ಸುಮಾರಿಗೆ, ಎಂದರೆ ಸುಮಾರು ಒಂದು ಸಾವಿರ ವರ್ಷಗಳಷ್ಟು ಹಿಂದೆ. ಅದಾದ ಸುಮಾರು ಇನ್ನೂರು ವರ್ಷಗಳನಂತರ (ಕ್ರಿಸ್ತಾಬ್ದ 1180ರಲ್ಲಿ) ಬೊಪ್ಪಣ ಪಂಡಿತನೆಂಬ ಕವಿ ಅದನ್ನು ನೋಡಿ ಬೆರಗಾಗಿ ಅದನ್ನು 'ಸುಮನೋಹರ ಭಯಂಕರ'ವೆಂದು ಬಣ್ಣಿಸಿದ. ಈ ವರ್ಣನೆ ಆ ಮೂರ್ತಿಗೆ ಎಷ್ಟು ಚೆನ್ನಾಗಿ ಒಪ್ಪುವುದೆಂದು ಅದನ್ನು ನೋಡಿದವರಿಗೆಲ್ಲ ತಿಳಿದಿದೆ.

ಬೊಪ್ಪಣ ಪಂಡಿತ ಆ ಮೂರ್ತಿಯನ್ನು ನೋಡಿ, ಅದರ ಕಲೆಗಾರಿಕೆಗೆ ಮೆಚ್ಚಿಕೊಂಡು, ಒಂಧು ಸಣ್ಣ ಕಾವ್ಯವನ್ನೂ ರಚಿಸಿದ. ಇದಕ್ಕೆ 'ಗೊಮ್ಮಟಸ್ತುತಿ'ಯೆಂದು ಹೆಸರು. ಇದನ್ನು ಗೊಮ್ಮಟೇಶ್ವರ ಮೂರ್ತಿಯೆದುರು ಇರುವ ಮಹಾದ್ವಾರದ ಹತ್ತಿರ ಕಲ್ಲಿನ ಮೇಲೆ ಕಡೆದಿದ್ದಾರೆ. ಶಿಲ್ಪದ ಸೊಗಸು, ಕಲ್ಪನೆಯ ಸೊಬಗು ಇವೆಲ್ಲವನ್ನೂ ಒಳಗೊಂಡ ಕಾವ್ಯ ಇದು. 'ಸುಜನೋತ್ತಂಸ'ನೆಂದು ಹೆಸರಾಂತ ಬೊಪ್ಪಣ 'ಕ್ಷಿತಿಸಂಪೂಜ್ಯ'ವೆನಿಸಿದ



ಶ್ರವಣಬೆಳ್ಗೊಳದಲ್ಲಿರುವ ಗೊಮ್ಮಟೇಶ್ವರನ ಶಿಲಾಮೂರ್ತಿ

ಗೊಮ್ಮಟೇಶ್ವರ ಜಿನನ ಶ್ರೀರೂಪವನ್ನು ಇಲ್ಲಿ ತುಂಬ ಸೊಗಸಾಗಿ ಚಿತ್ರಿಸಿದ್ದಾನೆ.

ಈ ಕವಿಯ ಆದರ ಎಷ್ಟು ಆಳವಾಗಿದೆ ನೋಡಿ: "ತುಂಬ ದೊಡ್ಡ ಮೂರ್ತಿಯಾದರೆ ಅದರಲ್ಲಿ ಸೊಬಗಿರಲಾರದು. ಸೊಬಗೂ ಮೇಲ್ಮಟ್ಟವೂ ಇರುವುವಾದರೆ ಅದು ಅತಿಶಯವಾಗದು. ಆದರೆ ಈ ಮೂರ್ತಿಯಲ್ಲಿ ಸೊಬಗೂ ಇದೆ, ಮೇಲ್ಮಟ್ಟವೂ ಇದೆ, ಅತಿಶಯವೂ ಇದೆ. ಗೊಮ್ಮಟೇಶ್ವರನ ವ್ಯಕ್ತಿತ್ವ ಎಷ್ಟು ದೊಡ್ಡದೋ ಈ ಮೂರ್ತಿ ಅಷ್ಟೇ ದೊಡ್ಡದು. ಶ್ರೀರೂಪಂ ಆತ್ಮೋಪಮಂ. ಮೂರ್ತಿ ಎಷ್ಟು ದೊಡ್ಡದೆಂದರೆ, ಹಕ್ಕಿಗಳು ಮರೆತಾದರೂ ಅದರ ಮೇಲೆ ಹಾರುವುದಿಲ್ಲ–ಗೊಮ್ಮಟನ ಮೇಲಿರುವ ಗೌರವ ಅಷ್ಟು! ಈ ಜಿನನ ಮನೆ ಮೂರುಲೋಕಗಳು–ನಾಗಲೋಕ ಎಂದರೆ ಪಾತಾಳ ನೆಲೆಗಟ್ಟು, ಇಡೀ ಭೂಮಿಯೇ ನೆಲ, ನಾಲ್ಕು ದಿಕ್ಕುಗಳೇ ನಾಲ್ಕು ಗೋಡೆಗಳು, ಮೇಲಿನ ಸ್ವರ್ಗಲೋಕವೇ ಮನೆಯ ಚಾವಣಿ, ಅದರಿಂದ ತೂಗುಬಿಟ್ಟ ದೀಪಗಳಂತೆ ಆಕಾಶದಲ್ಲಿ ಮಿನುಗುವ ನಕ್ಷತ್ರಗಳು! ಮತ್ತೆ ಗೊಮ್ಮಟನೇನು ಸಾಮಾನ್ಯನೇ? ರೂಪದಲ್ಲಿ ಮಾರ; ಪರಾಕ್ರಮದಲ್ಲಿ ಚಕ್ರವರ್ತಿಯನ್ನು ಗೆದ್ದವನು; ಭೂಮಿಯನ್ನೇ ದಾನಮಾಡಿದ ಉದಾರಿ; ತಪಸ್ಸಿಗೆ ನಿಲ್ಲಲು ಎರಡು ಹೆಜ್ಜೆ ಭೂಮಿಯನ್ನು ಪಡೆದು ಅದರಲ್ಲಿಯೇ ಬೇರೆಯವರಿಗೂ ಎಡೆಯಿದೆ ಎಂದವನು; ಕರ್ಮದ ಕಟ್ಟುಗಳನ್ನೆಲ್ಲ ಕಳಚಿ ಬಿಸಾಡಿದವನು ಅವನು!"

ಈ ಶಿಲ್ಪದ ಸ್ವಾರಸ್ಯವೆಂದರೆ ಅದರ ಎತ್ತರವನ್ನು ಸರಿಯಾಗಿ ಅಳೆಯುವುದು ಸುಲಭವಲ್ಲವೆಂಬುದು. ಡ್ಯೂಕ್ ಆಫ್ ವೆಲಿಂಗ್‌ಡನ್ (ಸರ್ ಎ. ವೆಲ್ಲೆಸ್ಲಿ) 1800ರಲ್ಲಿ ಶ್ರವಣಬೆಳ್ಗೊಳಕ್ಕೆ ಬಂದಾಗ ಈ ಮೂರ್ತಿಯನ್ನು ಅಳೆಯಿಸಿದರು; ಅವರ ಪ್ರಕಾರ ಇದರ ಎತ್ತರ ಅರವತ್ತು ಅಡಿ ಮೂರಂಗುಲ. ಆದರೆ ಅದೇ ಕಾಲದಲ್ಲಿ ಡಾ॥ ಬುಷಾನನ್ ಎಂಬಾತ ಅಳತೆಮಾಡಿದಾಗ ತಿಳಿದುಬಂದುದು ಎಪ್ಪತ್ತು ಅಡಿ ಮೂರಂಗುಲವೆಂದು. ಜೆ. ಡಿ. ಲೆಗ್ಗ್ ಎಂಬ ಪ್ರತಿಭಾವಂತ ಲೋಕೋಪಯೋಗಿ ಇಲಾಖೆಯ ಅಧಿಕಾರಿ ಈ ಮೂರ್ತಿಯನ್ನು ತುಂಬ ಕರಾರುವಾಕ್ಕಾಗಿ ಅಳತೆಮಾಡಲೆತ್ನಿಸಿ ಎಪ್ಪತ್ತೊಂದು ಅಡಿ ಎಂದು ನಿರ್ಧರಿಸಿದ! ಆದರೆ ಪ್ರಾಚ್ಯ ವಿಚಾರಗಳಲ್ಲಿ ಪಂಡಿತನಾಗಿದ್ದ ಲ್ಯೂಯಿ ರೈಸ್ ಪ್ರಕಾರ ಈ ಮೂರ್ತಿಯ ಎತ್ತರ ಐವತ್ತೆಂಟು ಅಡಿಗಳು ಅಷ್ಟೆ! ಬೌರಿಂಗ್ ಮೈಸೂರಿನ ಮುಖ್ಯಾಧಿಕಾರಿಯಾಗಿದ್ದ ಸಮಯದಲ್ಲಿ,

1865ರ ಜನವರಿ ಮೊದಲ ದಿನ ಚನ್ನರಾಯಪಟ್ಟಣದ ಅಮಲ್ದಾರರು ಈ ಮೂರ್ತಿಯನ್ನು ವಿವರವಾಗಿ ಅಳತೆಮಾಡಿಸಿದರು. ಆಗ ತಿಳಿದುಬಂದುದು ಒಟ್ಟು ಎತ್ತರ ಐವತ್ತೇಳು ಅಡಿಗಳು ಎಂದು. ವಿವರಗಳು—

ತಲೆಯಿಂದ ಕಿವಿಯ ಕೆಳಭಾಗದವರೆಗೆ	6 ಅಡಿ	6 ಅಂಗುಲ
ಕಿವಿಯಿಂದ ಪಾದದವರೆಗೆ	50 ಅಡಿ	
ಕಿವಿಯಿಂದ ಕತ್ತಿನ ಕೆಳಭಾಗದವರೆಗೆ	2 ಅಡಿ	
ಕಿವಿಯಿಂದ ಕಂಕುಳಿನವರೆಗೆ	7 ಅಡಿ	
ಕಿವಿಯಿಂದ ನಡುವಿನವರೆಗೆ	21 ಅಡಿ	
ನಡುವಿನ ಅಡ್ಡಗಲ	10 ಅಡಿ	
ಹೆಗಲಿನ ಅಡ್ಡಗಲ	26 ಅಡಿ	
ಕೆಳಹೊಟ್ಟೆಯ ಅಡ್ಡಗಲ	13 ಅಡಿ	
ತೊಡೆಯ ಅರ್ಧಸುತ್ತಳತೆ	10 ಅಡಿ	
ಮುಂಗಾಲಿನ ಅರ್ಧಸುತ್ತಳತೆ	6 ಅಡಿ	4 ಅಂಗುಲ
ಕಾಲಿನ ಅಗಲ	4 ಅಡಿ	6 ಅಂಗುಲ
ಕಾಲಿನ ಮುಂಭಾಗದ ಅಡ್ಡಳತೆ	6 ಅಡಿ	
ಕಾಲಿನ ಹೆಬ್ಬೆರಳಿನ ಉದ್ದ	2 ಅಡಿ	9 ಅಂಗುಲ
ತೋರುಬೆರಳಿನ ಉದ್ದ	3 ಅಡಿ	6 ಅಂಗುಲ
ನಡುಬೆರಳಿನ ಉದ್ದ	5 ಅಡಿ	3 ಅಂಗುಲ
ಉಂಗುರದ ಬೆರಳಿನ ಉದ್ದ	4 ಅಡಿ	7 ಅಂಗುಲ
ಕಿರುಬೆರಳಿನ ಉದ್ದ	2 ಅಡಿ	8 ಅಂಗುಲ

ಮೂರ್ತಿಯ ಪಾದಪೀಠದ ಕಮಲವಿನ್ಯಾಸದಲ್ಲಿ ಎಡಕಾಲ ಬಳಿ ಶಿಲ್ಪಿಯು ತನ್ನ ಅಳತೆಗೋಲನ್ನು ಕಾಣಿಸಿದ್ದಾನೆ; ಇದರ ಉದ್ದ ಮೂರಡಿ ನಾಲ್ಕಂಗುಲ. ಇದನ್ನು 18ರಿಂದ ಗುಣಿಸಿದರೆ ಮೂರ್ತಿಯ ಪ್ರಮಾಣ ತಿಳಿಯುತ್ತದೆ ಎಂದು ಹಿಂದಿನಿಂದ ಬಂದ ನಂಬಿಕೆ. ಇದನ್ನು ಅನುಸರಿಸಿದರೆ ಮೂರ್ತಿಯ ಎತ್ತರ ಅರವತ್ತು ಅಡಿಗಳು. ಹಳೆಯಕಾಲದ ಸಂಸ್ಕೃತ ಶ್ಲೋಕಗಳು ಕೆಲವು ಮೂರ್ತಿಯ ವಿವರಗಳನ್ನು ಕೊಟ್ಟಿವೆ. ತಲೆಯಿಂದ ಕಾಲಿನವರೆಗೆ 36½ ಮೊಳ, ಹೊಕ್ಕುಳಿನಿಂದ ಕಾಲಿನವರೆಗೆ 20 ಮೊಳ, ಕಿವಿಯ ಉದ್ದ 2 ಮೊಳ, ಕಿವಿಯಿಂದ ಕಿವಿಗೆ 8 ಮೊಳ, ಕತ್ತಿನ ಎತ್ತರ 1¾ ಮೊಳ, ಕತ್ತಿನ ಸುತ್ತಳತೆ 10¾ ಮೊಳ, ಭುಜಗಳ ವಿಸ್ತಾರ 16 ಮೊಳ,



ಕಾರ್ಕಳದಲ್ಲಿರುವ ಗೊಮ್ಮಟನ ವಿಗ್ರಹ



ವೇಣೂರಿನಲ್ಲಿರುವ ಗೊಮ್ಮಟನ ವಿಗ್ರಹ



ಧರ್ಮಸ್ಥಳದಲ್ಲಿ ಪ್ರತಿಷ್ಠಾಪಿಸಲ್ಪಡುವ ಗೊಮ್ಮಟನ ಮೂರ್ತಿಯನ್ನು ಶಿಲ್ಪಿ ರಂಜಾಳ
ಗೋಪಾಲಕೃಷ್ಣ ಶೆಣೈ ಅವರು ಕಡೆಯುತ್ತಿರುವುದು.

ಸೊಂಟದ ಸುತ್ತಳತೆ 20 ಮೊಳ, ಹೀಗೆ ಹದಿಮೂರು ಆಳೆತ್ತರದ ಮೂರ್ತಿ ಎಂದು ಒಂದು ಒಕ್ಕಣೆ.

ಎತ್ತರ ಖಚಿತವಾಗಿ ಎಷ್ಟಾದರೂ ಇರಲಿ, ಮೂರ್ತಿಯ ಆಕೃತಿಯಂತೂ ಅದ್ಭುತವಾದುದು ಎನ್ನುವುದರಲ್ಲಿ ಸಂಶಯವಿಲ್ಲ. ಇಜಿಪ್ಟ್ ದೇಶದ ರ್‍ಯಾಂಸೆಸ್ ವಿಗ್ರಹಗಳನ್ನು ಬಿಟ್ಟರೆ, ಎತ್ತರದಲ್ಲಿ ಗೊಮ್ಮಟೇಶ್ವರನ ಮೂರ್ತಿಯನ್ನು ಮೀರಿಸಿದ ವಿಗ್ರಹ ಜಗತ್ತಿನಲ್ಲಿಯೇ ಎಲ್ಲಿಯೂ ಇಲ್ಲ. ಬರಿಯ ಎತ್ತರವೇ ಲೆಖ್ಖವೇನು? ಇಷ್ಟು ದೊಡ್ಡ ಪ್ರಮಾಣದ ಮೂರ್ತಿಯಾದರೂ, ಮುಖ ಮಾತ್ರ ಹಸುಗೂಸಿನ ಮುಖದಂತೆ ಮುಗ್ಧವಾಗಿದೆ, ಪ್ರಸನ್ನವಾಗಿದೆ. ಅದನ್ನು ನೋಡಿದೊಡನೆ 'ಅದ್ಭುತ' ಎನ್ನುವ ಭಾವನೆ ಮರೆಯಾಗಿ 'ಶಾಂತ' ಎನ್ನುವ ಭಾವನೆ ಮೂಡುತ್ತದೆ. ಅದಕ್ಕಾಗಿಯೇ ಬೊಪ್ಪಣ ಕವಿ ಇದನ್ನು 'ಸುಮನೋಹರ ಭಯಂಕರ' ಎಂದು ಕರೆದುದು.

ನಮ್ಮ ನಾಡಿನಲ್ಲಿ ಶ್ರವಣಬೆಳ್ಗೊಳದ ಗೊಮ್ಮಟೇಶ್ವರ ಮೂರ್ತಿಯಂತೆಯೇ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ಮತ್ತು ವೇಣೂರುಗಳಲ್ಲಿರುವುವೂ ಪ್ರಸಿದ್ಧವಾಗಿವೆ. ಕಾರ್ಕಳದ ಗೊಮ್ಮಟ ಮೂರ್ತಿ ಕರಿಯ ಕಲ್ಲಿನದು ; 1432ರಲ್ಲಿ ಕಡೆಯಿಸಿದ ಈ ಮೂರ್ತಿಯ ಎತ್ತರ 41 ಅಡಿ 5 ಅಂಗುಲ. ವೇಣೂರಿನ ಮೂರ್ತಿ ಪ್ರತಿಷ್ಠೆಯಾದುದು 1604ರಲ್ಲಿ; ಅದರ ಎತ್ತರ 35 ಅಡಿ. ಮೈಸೂರಿನ ಹತ್ತಿರ ಯೆಲವಾಲಕ್ಕೆ ನಾಲ್ಕು ಮೈಲಿ ದೂರದಲ್ಲಿರುವ ಶ್ರವಣ ಗುಡ್ಡದ ಮೂರ್ತಿ ಇಪ್ಪತ್ತು ಅಡಿ ಎತ್ತರವಾಗಿದೆ. ಈಚೆಗೆ ಧರ್ಮಸ್ಥಳದ ಹೆಗ್ಗಡೆಯವರು ಕಾರ್ಕಳದ ರಂಜಾಳ ಗೋಪಾಲಕೃಷ್ಣ ಶೆಣೈ ಅವರಿಂದ ಧರ್ಮಸ್ಥಳಕ್ಕಾಗಿ ಮತ್ತೊಂದು 52 ಅಡಿ ಎತ್ತರದ ಬಾಹುಬಲಿ ಮೂರ್ತಿಯನ್ನು ಕಡೆಯಿಸಿದ್ದಾರೆ. ಇವಲ್ಲದೆ ಇನ್ನೂ ಕೆಲವು ಮೂರ್ತಿಗಳು ಅಲ್ಲಲ್ಲಿ ಇವೆ. ಆದರೆ ಇವುಗಳಲ್ಲೆಲ್ಲ ತುಂಬ ಹಳೆಯದೆಂದರೆ ಶ್ರವಣಬೆಳ್ಗೊಳದ್ದೇ; ತುಂಬ ಎತ್ತರವಾದುದೂ ಅದೇ; ತುಂಬ ಸುಂದರವಾದುದೂ ಅದೇ ; ತುಂಬ ಪ್ರಸಿದ್ಧವಾದುದೂ ಅದೇ.

ಗೊಮ್ಮಟನ ಕಥೆ

ಗೊಮ್ಮಟೇಶ್ವರನೆಂದರೆ ಯಾರು ? ಈ ಹೆಸರನ್ನು ಬಳಸಿದವರಲ್ಲಿ ಮೊದಲಿಗನೆಂದರೆ ಮೇಲೆ ಹೇಳಿದ ಬೊಪ್ಪಣ ಕವಿಯೇ ; ಅವನ 'ಗೊಮ್ಮಟ ಸ್ತುತಿ'ಯಲ್ಲಿ. ಅವನು ಈ ಹೆಸರನ್ನು ಬಳಸಿದುದು ಬಾಹುಬಲಿಯನ್ನು ಕುರಿತು. ಈ ಬಾಹುಬಲಿಯೆಂಬುವನು ಯಾರು ?

ನಮ್ಮ ದೇಶದ ಹಲವಾರು ಜಾನಪದಗಳಲ್ಲಿ ಕೋಸಲ ಒಂದು. ಅದ ರಲ್ಲಿ ಅಯೋಧ್ಯೆಯೆಂಬುದೊಂದು ನಗರ. ಇದಕ್ಕೆ ವಿನೀತನಗರವೆಂದೂ ಹೆಸರಿದ್ದಿತು. ಅಲ್ಲಿ ಇಕ್ಷ್ವಾಕುವಂಶಕ್ಕೆ ಸೇರಿದ ಕ್ಷತ್ರಿಯ ರಾಜರು ರಾಜ್ಯ ವಾಳುತ್ತಿದ್ದರು; ಅವರೆಲ್ಲ ಕಶ್ಯಪ ಗೋತ್ರದವರು. ನಮ್ಮ ಕಥೆಗೆ ಸಂಬಂಧಿಸಿ ದಂತೆ, ನಾಭಿರಾಜನೆಂಬ ರಾಜ ಅವರಲ್ಲಿ ಪ್ರಸಿದ್ಧನಾಗಿದ್ದವನು. ಅವನ ರಾಣಿ ಮರೂದೇವಿ. ಅವಳು ಗರ್ಭವತಿಯಾಗಿದ್ದಾಗ ವೃಷಭವೊಂದು ಬಂದು ತನ್ನೊಡಲು ಸೇರಿದಂತೆ ಕನಸಾಯಿತು. ಆದುದರಿಂದ ಹುಟ್ಟಿದ ಮಗುವಿಗೆ ವೃಷಭದೇವ (ಋಷಭ) ನೆಂದೇ ಹೆಸರಿಟ್ಟರು. ಇವನೇ ಮುಂದೆ ಲೋಕವಿಖ್ಯಾತನಾದ ಚಕ್ರವರ್ತಿಯಾದ. ಜನರ ನಾಗರಿಕತೆಗೆ ಅವನೇ ಕಾರಣನಂತೆ ; ಓದು, ಬರಹ, ಉದ್ಯಮ, ಕಲೆ, ಆಡಳಿತ, ವಾಣಿಜ್ಯ, ವ್ಯವ ಹಾರ ಎಲ್ಲವೂ ಆರಂಭವಾದುದು ಅವನಿಂದಲೇ ಎಂದು ಹೇಳುತ್ತಾರೆ. ಜೈನ ಧರ್ಮವಂತೂ ಅವನಿಂದಲೇ ಮೊದಲಾಯಿತೆಂದು ನಂಬಿಕೆಯಿದೆ ; ಹಾಗೆಂದೇ ಅವನು 'ಆದಿನಾಥ'. ಜೈನಧರ್ಮವನ್ನು ಉಳಿಸಿ, ಬೆಳೆಸಿದ ಇಪ್ಪತ್ತನಾಲ್ಕು ಮಂದಿ ತೀರ್ಥಂಕರರಲ್ಲಿ ಅವನೇ ಮೊದಲನೆಯವನು–ಆದಿ ತೀರ್ಥಂಕರ. ಅವನೇ ಮೊದಲ ಚಕ್ರವರ್ತಿ, ಮೊದಲ ಮುನಿ, ಮೊದಲ ಜಿನ, ಮೊದಲ ತೀರ್ಥಂಕರ ಎಂದು ಹೇಳುವುದಿದೆ.

ಅವನು ಮುನಿಯಾಗುವ ಮೊದಲು, ಚಕ್ರವರ್ತಿಯಾಗಿರುವಾಗ ಅವ ನಿಗೆ ಇಬ್ಬರು ರಾಣಿಯರು–ಸುಮಂಗಲೆ (ಇವಳಿಗೆ ಯಶಸ್ವಿನಿಯೆಂದೂ ಹೆಸರು) ಮತ್ತು ಸುನಂದೆ. ಇವರಿಬ್ಬರೂ ಅಕ್ಕತಂಗಿಯರೆಂದೂ ಋಷಭ ದೇವನ ಸೋದರಮಾವನ ಮಕ್ಕಳೆಂದೂ ಹೇಳುವುದಿದೆ. ಹಿರಿಯವಳಾದ ಸುಮಂಗಲೆಗೆ ಭರತನೆಂಬ ಮಗ, ಬ್ರಾಹ್ಮಿಯೆಂಬ ಮಗಳು ; ಕಿರಿಯವಳಾದ

ಸುನಂದೆಗೆ ಬಾಹುಬಲಿ (ಅಥವಾ ಭುಜಬಲಿ) ಯೆಂಬ ಮಗ, ಸುಂದರಿಯೆಂಬ ಮಗಳು. ಇವರಿಗೆಲ್ಲ ರಾಜನೇ ಓದುಬರಹ, ನೀತಿ–ನಯ, ಧರ್ಮ–ವ್ಯವ ಹಾರ ಎಲ್ಲವನ್ನೂ ಕಲಿಸಿದ.

ರಾಜನೊಮ್ಮೆ ಓಲಗದಲ್ಲಿರುವಾಗ ನೀಲಾಂಜನೆಯೆಂಬ ದೇವಕನ್ನಿಕೆ ಸೊಗಸಾಗಿ ನಾಟ್ಯಮಾಡುತ್ತಿರುವಾಗ, ಇದ್ದಕ್ಕಿದ್ದಂತೆಯೇ ಕೆಳಗೆ ಬಿದ್ದು ಪ್ರಾಣ ಬಿಟ್ಟಳು; ಅವಳ ಆಯುಸ್ಸು ಮುಗಿದಿದ್ದಿತು. ಇದರಿಂದ ರಾಜ ನಿಗೆ ಜೀವನವು ನಶ್ವರ, ಪ್ರಪಂಚದ ಸುಖಸಂತೋಷಗಳು ನೀರ ಮೇಲೆ ಗುಳ್ಳೆಗಳಿರುವಂತೆ ಎಂಬ ಅರಿವು ಮೂಡಿ, ಹಿರಿಯಮಗನಾದ ಭರತನಿಗೆ ಪಟ್ಟಗಟ್ಟಿ ಬಾಹುಬಲಿಗೆ ಪೋದನಪುರದ ಒಡೆತನವನ್ನು ಕೊಟ್ಟು ತಾನು ತಪಸ್ಸುಮಾಡಲು ಹೊರಟನು. ಅಯೋಧ್ಯೆಯ ಹೊರಗಿದ್ದ ಸಿದ್ಧಾರ್ಥಕ ವನಕ್ಕೆ ಹೋಗಿ, ಅಲ್ಲಿ ತನ್ನ ತಲೆಯಿಂದ ಐದು ಹಿಡಿ ಕೂದಲುಗಳನ್ನು ಕಿತ್ತುಕೊಂಡು, ಜಿನದೀಕ್ಷೆಯನ್ನು ಪಡೆದು ಕಠೋರವಾದ ತಪಶ್ಚರ್ಯ ಮಾಡಲು ಮೊದಲಿಟ್ಟು, ಕಾಲಕ್ರಮದಲ್ಲಿ ಜಿನನಾದನು ; ತೀರ್ಥಂಕರನೂ ಆದ.

ಇತ್ತ, ಅಯೋಧ್ಯೆಯಲ್ಲಿ ತನ್ನ ತಂದೆಯ ಸಿಂಹಾಸನವನ್ನೇರಿದ ಭರತ ಚಕ್ರವರ್ತಿಗೆ ಇಡೀ ನಾಡಿನಲ್ಲೆಲ್ಲ ತನ್ನ ಮೇಲ್ಮೆಯನ್ನು ಸ್ಥಿರಪಡಿಸಬೇಕೆಂಬ ಮನಸ್ಸಾಯಿತು. ನಾಡಿನಲ್ಲಿ ಸಾವಿರಾರು ಸ್ವತಂತ್ರ ರಾಜರಿದ್ದರು; ಸಾಮಂತರೂ ಇದ್ದರು. ಸಾಮಂತರೇನೋ ಭರತನ ಆಳ್ವಿಕೆಯನ್ನು ತಟ್ಟನೆ ಒಪ್ಪಿಕೊಂಡುಬಿಟ್ಟರು. ಆದರೆ ಸ್ವತಂತ್ರರಾಗಿದ್ದ ರಾಜರು ಹಿಂದುಮುಂದು ನೋಡಿದರು ; ಅವರೇಕೆ ಭರತನ ಮೇಲ್ಮೆಯನ್ನು ಒಪ್ಪಿಕೊಳ್ಳಬೇಕು ? ಆದರೆ ಭರತನಿಗೆ ಇಡೀ ನಾಡಿನಲ್ಲಿ ತಾನೇ ಒಡೆಯನಾಗಿರಬೇಕೆಂಬ ಗೀಳು. ಹೀಗಾಗಿ, ಒಪ್ಪದಿದ್ದ ರಾಜರ ಮೇಲೆ ಕಾದಾಡ ಹೊರಟನು. ತನ್ನ ಸೇನೆ ಯನ್ನು ಸಜ್ಜುಗೊಳಿಸಿ ದಿಗ್ವಿಜಯಕ್ಕೆಂದು ಹೊರಟನು.

ಅವನ ಬಳಿ ಚಕ್ರರತ್ನವೆಂಬ ಆಯುಧವೊಂದಿದ್ದಿತು. ಅದು ಅಪ ರೂಪದ ಆಯುಧ. ಯಾರೂ ಅದನ್ನು ಹಿಡಿಯದಿದ್ದರೂ, ತಾನೇ ಗಿರ್ರನೆ ತಿರುಗುತ್ತ ಮುನ್ನುಗ್ಗಿ ಹೋಗುತ್ತಿತ್ತು. ಅದಕ್ಕೆ ಅಡ್ಡಿ ಬಂದಾಗ ಮಾತ್ರ ಮುಂದೆ ಹೋಗದೆ ನಿಲ್ಲುತ್ತಿತ್ತು. ಭರತ ಅದನ್ನು ಮುಂದುಮಾಡಿಕೊಂಡು, ಸೇನೆಯನ್ನು ಹಿಂದುಮಾಡಿಕೊಂಡು ಹೊರಟ. ಹೀಗೆ ಹೊರಟವನು ಇಡೀ ನಾಡಿನಲ್ಲೆಲ್ಲ ಸುತ್ತಾಡಿದ. ಅವನ ಪರಾಕ್ರಮವನ್ನೂ ಸೇನೆಯ ಸಾಮರ್ಥ್ಯ



ವನ್ನೂ ಚಕ್ರರತ್ನದ ಅದ್ಭುತವನ್ನೂ ಕಂಡು ರಾಜರೆಲ್ಲ ಬೆದರಿ, ಬೆರಗಾಗಿ ಶರಣಾಗತರಾದರು; ಕಪ್ಪಕಾಣಿಕೆಗಳನ್ನು ಮುಂದಿಟ್ಟು ಕೈಮುಗಿದರು, ನಡು ಕಟ್ಟಿ ತಲೆಬಾಗಿದರು. ಅವನ ತೊಂಬತ್ತೆಂಟು ಮಂದಿ ತಮ್ಮಂದಿರೂ ಬೇರೆ ಬೇರೆ ಕಡೆ ದೊರೆಗಳಾಗಿದ್ದವರು ಅವನ ಅಧೀನರಾದರು. ಅವನು ದಿಗ್ವಿಜಯಕ್ಕೆ ಹೊರಟಾಗ ಅವನ ಮುಂದೆ ಸಾಗುತ್ತಿದ್ದ ಚಕ್ರರತ್ನ ಯಾವ ಅಡ್ಡಿ–ಆತಂಕವಿಲ್ಲದೆ, ಅಡೆ ತಡೆಯಿಲ್ಲದೆ, ಎಲ್ಲಿಯೂ ನಿಲ್ಲದೆ ಎಲ್ಲೆಡೆಯೂ ಮೆರೆದು ಅಯೋಧ್ಯೆಗೆ ಹಿಂದಿರುಗಿತು. ತುಂಬ ಸಂತೋಷದಿಂದ ಭರತೇಶ ಅದನ್ನು ಹಿಂಬಾಲಿಸಿಬಂದ.

ಆದರೆ ಅರಮನೆಯ ಬಳಿ ದೊರೆ ಬಂದಾಗ, ಅವನ ಮುಂದಿದ್ದ ಚಕ್ರರತ್ನ ಅರಮನೆಯೊಳಗೆ ಹೋಗದೆ, ತಲೆಬಾಗಿಲ ಹೊರಗೇ ಗಿರ್ರನೆ ಸುತ್ತುತ್ತ ನಿಂತುಬಿಟ್ಟಿತು. ನೋಡಿದವರಿಗೆಲ್ಲ ಇದು ಸೋಜಿಗವೆನಿಸಿತು. ಇಡೀ ನಾಡಿನಲ್ಲಿಯೇ ತಡೆಯಿಲ್ಲದೆ ಸುತ್ತಾಡಿ ಬಂದ ಈ ಅದ್ಭುತ ಆಯುಧ ಒಡೆಯನ ಅರಮನೆಯ ಬಳಿಯೇ ನಿಂತಿತೇಕೆ ? ಭರತೇಶನಿಗೆ ಮಣಿಯದಿದ್ದವರು, ಅವನ ಎದುರುಬೀಳುವವರು ನಾಡಿನಲ್ಲಿ ಎಲ್ಲಿಯೂ ಇಲ್ಲದಿದ್ದಾಗ ಅರಮನೆಯಲ್ಲಿ ಯಾರಿದ್ದಾರು ? ಅವನ ತಮ್ಮ ಬಾಹುಬಲಿಯೇನೋ ಅರಮನೆಯಲ್ಲಿಯೇ ಇದ್ದ. ಆದರೆ ಅವನು ಸೌಜನ್ಯಮೂರ್ತಿ, ಹಿರಿಯರಿಗೆ ವಿಧೇಯನಾಗಿಯೇ ನಡೆದುಕೊಳ್ಳುವವನು, ತುಂಬ ಗುಣಶಾಲಿ ; ಉಳಿದೆಲ್ಲ ತಮ್ಮಂದಿರಿಗಿಂತ ಹೆಚ್ಚು ಒಲವು ಇವನಿಗೆ ಅಣ್ಣನ ಮೇಲೆ. ಹೀಗಿರುವಾಗ ಅವನು ಭರತನಿಗೆ ಎದುರುಬೀಳುವನೆ ? ಇನ್ನು ಅರಮನೆಯಲ್ಲಿಯೇ ಭರತನ ಮೇಲ್ಮೆಯನ್ನು ಒಪ್ಪದಿದ್ದವರು ಯಾರಿದ್ದಾರು ?

ಭರತನಿಗಂತೂ ದಿಗ್ಭ್ರಮೆಯಾಯಿತು ; ಮಂತ್ರಿಗಳೂ ಸರದಾರರೂ ಪರಿಜನರೂ ಊರಜನರೂ ಕುತೂಹಲದಿಂದ ನೆರೆದರು. ಪುರೋಹಿತರು ಬಂದರು ; ಜ್ಯೋತಿಷಿಗಳು ಬಂದರು ; ಲಾಕ್ಷಣಿಕರು ಬಂದರು, ಲಾಕ್ಷಣಿಕರೆಂದರೆ ಇಂಥ ಪ್ರಸಂಗಗಳ ಅರ್ಥವನ್ನು ಬಿಡಿಸುವವರು. ಅರಮನೆಯಲ್ಲಿ ಅರಸನ ಹಗೆಯಿರುವುದೇ ದಿಟವೆಂದೂ, ಬೇರೆ ಯಾವ ಕಾರಣಕ್ಕೂ ಚಕ್ರರತ್ನ ನಿಲ್ಲಲಿಲ್ಲವೆಂದೂ ಅವರು ತಿಳಿಸಿದರು. ಅರಮನೆಯಲ್ಲಿರುವವರನ್ನೆಲ್ಲ ಕಂಡು, ಮಾತನಾಡಿಸಿ, ವಿಚಾರ ತಿಳಿದುಬರಲು ಮಂತ್ರಿಗಳೂ ಅರಸನ ಆಪ್ತರೂ ಅರಮನೆಯೊಳಗೆ ಹೋದರು. ಒಳಗಿದ್ದ ಎಲ್ಲರೂ ಭರತೇಶನಿಗೆ ತಾವು ಅಧೀನರೆಂದು ಸ್ಪಷ್ಟಪಡಿಸಿ ಅವನಿಗೆ ತಲೆಬಾಗಿದರು.

ಆದರೆ ಪೋದನಪುರದ ಅರಸನಾಗಿದ್ದು, ಆಗ ಭರತನ ಅರಮನೆಗೆ ಬಂದಿದ್ದ ಅವನ ತಮ್ಮ ಬಾಹುಬಲಿಯೊಬ್ಬ ತಲೆಬಾಗಲಿಲ್ಲ. ಮಂತ್ರಿಗಳು ಅವನ ಬಳಿ ಬಂದು, "ಜೀಯಾ, ತಾವು ಭರತೇಶ ಚಕ್ರವರ್ತಿಗೆ ಮಣಿಯುವಿರಷ್ಟೆ?" ಎಂದು ಕೇಳಲು ಅವನು "ಇಲ್ಲ, ನಾನು ತಂದೆ ಋಷಭದೇವನಿಗೆ ಮಾತ್ರ ಮಣಿಯುವವನು; ಬೇರೆ ಯಾರಿಗೂ ಮಣಿಯಲಾರೆ" ಎಂದುಬಿಟ್ಟ. ಮಂತ್ರಿಗಳು ಬಾಹುಬಲಿ ಹೀಗೆಂದಾನೆಂದು ಬಗೆದಿರಲಿಲ್ಲ; ಅವನ ಮಾತನ್ನು ಕೇಳಿ ಮುಂದೇನಾದೀತೆಂದು ಅವರು ಬೆದರಿದರು. "ಭರತೇಶರು ಇಡೀ ನಾಡಿನಲ್ಲೆಲ್ಲ ದಿಗ್ವಿಜಯಮಾಡಿ ಹಿಂದಿರುಗಿದ್ದಾರೆ; ನಾಡಿನ ಎಲ್ಲ ರಾಜರೂ ಅವರಿಗೆ ತಲೆಬಾಗಿದ್ದಾರೆ; ತಮ್ಮ ತಮ್ಮಂದಿರೆಲ್ಲ ಅವರಿಗೆ ಮಣಿದಿದ್ದಾರೆ" ಎಂದು ಮಂತ್ರಿಗಳು ಬಾಹುಬಲಿಗೆ ಬೆಸಸಿದರು. ಬಾಹುಬಲಿ ನಿಶ್ಚಲನಾಗಿ "ಇರಬಹುದು, ಆದರೆ ನಾನು ಮಾತ್ರ ಮಣಿಯಲಾರೆ. ಭರತೇಶನ ಮೇಲೆ ನನಗೇನು ಮುನಿಸಿಲ್ಲ, ಹಗೆತನವಿಲ್ಲ. ಆದರೆ ಮಣಿಯುವ ಮಾತು ಬಂದಾಗ ಅದು ನನಗೆ ಒಗ್ಗದ ಮಾತು" ಎಂದಂದನು. ಅವನ ಮನಸ್ಸು ಗಟ್ಟಿಯಾಗಿತ್ತು.

ಮಂತ್ರಿಗಳಿಗೆ ಇಕ್ಕಟ್ಟಿನ ಪರಿಸ್ಥಿತಿಯಾಯಿತು. ಬಾಹುಬಲಿಯೊಬ್ಬನು ಮಣಿಯದಿದ್ದರೂ ಭರತೇಶನ ದಿಗ್ವಿಜಯ ಪೂರ್ಣವಾಗುವುದಿಲ್ಲ; ಅದಕ್ಕಾಗಿ ಅವನು ಬಾಹುಬಲಿಯೊಂದಿಗೆ ಕಾದಾಡಬೇಕಾಗುವುದು. ಇಬ್ಬರಲ್ಲಿಯೂ ಒಲುವು ಮೂಡಿರುವಾಗ ಅವರು ಕಾದಾಡುವುದು ಹೇಗೆ? ಗುಣದಲ್ಲಿ, ಶೀಲದಲ್ಲಿ, ಔದಾರ್ಯದಲ್ಲಿ, ವೀರ್ಯದಲ್ಲಿ ಇಬ್ಬರೂ ಒಬ್ಬರನ್ನೊಬ್ಬರು ಮೀರಿಸಿರುವವರೇ! ಅವರಲ್ಲಿ ಕಾದಾಟವಾಗುವುದು ಯಾರಿಗೂ ಹಿತವಿಲ್ಲ. ಕಾದಾಟವಾದರೂ ಯಾರು ಗೆಲ್ಲುವರೆಂಬ ನಿಶ್ಚಯವಿಲ್ಲ, ಏಕೆಂದರೆ ಇಬ್ಬರೂ ಸಮನಾಗಿಯೇ ಶೂರರು, ವೀರರು, ಪಟುಭಟರು. ಈ ಇಬ್ಬರಲ್ಲಿ ಯಾರು ಯಾರಿಗೂ ಯಾವುದರಲ್ಲಿಯೂ ಕಡಿಮೆಯಿಲ್ಲ.

ಮಂತ್ರಿಗಳು ಅರಮನೆಯಿಂದ ಹೊರಬಿದ್ದು, ಹೊರಗಡೆಯೇ ಕಾದಿದ್ದ ಭರತೇಶ ಚಕ್ರವರ್ತಿಯ ಬಳಿ ಬಂದು, ಬಾಹುಬಲಿಯ ನಿಲುವನ್ನು ನಾಜೂಕಾಗಿ ತಿಳಿಸಿದರು. ಭರತನಿಗೆ ಇದು ನಂಬಲಾರದಾಯಿತು. ತನ್ನ ಪ್ರೀತಿಯ ತಮ್ಮನೇ ತನ್ನೆದುರು ಬೀಳುವನೆ ? ಹೀಗೆಂದು ಅವನು ಕನಸಿನಲ್ಲಿಯೂ ನೆನಸಿರಲಿಲ್ಲ. ನಾಡಿನಲ್ಲೆಲ್ಲ ದಿಗ್ವಿಜಯ ಸಾಧಿಸಿ ಮೆರೆದು ಬಂದಿದ್ದ ಭರತೇಶನಿಗೆ ಇದು ಸ್ವಲ್ಪ ಅಪಮಾನದ ವಿಚಾರವೂ ಆಯಿತು. ತನ್ನ ಮನೆಯಲ್ಲಿಯೇ

ತನ್ನನ್ನು ಮರ್ಯಾದೆಯಿಂದ ಕಾಣದವರಿದ್ದಾರಲ್ಲವೆ ? ಹೀಗಿರುವಾಗ ದಿಗ್ವಿಜಯಕ್ಕೆ ಅರ್ಥವೇನು ? ಬಾಹುಬಲಿಗೆ ಬುದ್ಧಿಕಲಿಸಬೇಕೆಂದು ಭರತೇಶ ನಿಶ್ಚಯಿಸಿದ. ಯುದ್ಧ ಮಾಡಲು ಸಿದ್ಧನಾಗಬೇಕೆಂದು ಬಾಹುಬಲಿಗೆ ತಿಳಿಸಿ ರೆಂದು ತನ್ನ ಮಂತ್ರಿಗಳನ್ನು ಕಳುಹಿಸಿದ. ಬಾಹುಬಲಿ ಇದಕ್ಕೊಪ್ಪಿ ತನ್ನ ರಾಜಧಾನಿಯಾದ ಪೋದನಪುರಕ್ಕೆ ತೆರಳಿದ.

ಇವರಿಬ್ಬರ ನಡುವೆ ಹಗರಣವನ್ನು ತಡೆಯಬೇಕೆಂದು ಊರ ಹಿರಿಯರೆಲ್ಲರೂ ಆಸೆಪಟ್ಟರು ; ಅಧಿಕಾರಿಗಳೆಲ್ಲರೂ ಯತ್ನಿಸಿದರು. ತನ್ನ ಪ್ರತಿಷ್ಠೆಗೆ ಇದು ಕುಂದಾಯಿತೆಂದು ಭರತನ ಮುನಿಸು ; ಹಿರಿಯಣ್ಣನಾದರೂ ಕಾರಣವಿಲ್ಲದೆ ಕತ್ತಿಯ ಬಲದಿಂದ ಎರಗಿಬಂದವನಿಗೆ ಮಣಿಯುವುದು ಅಂಜಿಕೆಯ ಕುರುಹೆಂದು ಬಾಹುಬಲಿಯ ಹಟ. ಅಂತೂ ಇವರಿಬ್ಬರ ನಡುವೆ ಮೊದಲಿದ್ದ ಒಲುವು ಇಂಗಿತು; ಮೇಲ್ಮೆಗಾಗಿ ನಿಶ್ಚಯ ಮೂಡಿತು. ಹೋರಾಡಿಯೇ ತಮ್ಮ ಹಟವನ್ನು ಕೊನೆಗಾಣಿಸಬೇಕೆಂಬುದು ಇಬ್ಬರದೂ ನಿರ್ಧಾರವಾಯಿತು.

ಬಾಹುಬಲಿಯ ವಿಜಯ

ಅಣ್ಣತಮ್ಮಂದಿರು ಹೀಗೆ ಮನಸ್ಸು ಗಟ್ಟಿಮಾಡಿಕೊಂಡು, ಸೇನೆಗಳಿಂದ ಸಜ್ಜಿತರಾಗಿ ರಣರಂಗಕ್ಕಿಳಿದರು. ಆ ಕಾಲದಲ್ಲಿ ಯುದ್ಧ ನಡೆಯುವಾಗಲೂ ಒಂದು ಕ್ರಮವಿದ್ದಿತು; ಅದನ್ನು ನಿಯಮದಿಂದ ಅನುಸರಿಸುತ್ತಲೂ ಇದ್ದರು. ಹಲವಾರು ಬಗೆಯ ಯುದ್ಧಗಳಿದ್ದುವು; ಒಂದಾದಮೇಲೊಂದು ಕ್ರಮವಾಗಿ ಬರುತ್ತಿದ್ದುವು. ಅವುಗಳಲ್ಲಿ ಮೊದಲನೆಯದು ದೃಷ್ಟಿಯುದ್ಧ. ಎಂದರೆ, ಕಾದಾಡುವವರು ಒಬ್ಬರೊಬ್ಬರ ಮುಂದೆ ನಿಂತು ತಂತಮ್ಮ ಕಣ್ಣುಗಳಿಂದಲೇ ಎದುರಾಳಿಯನ್ನು ಸೋಲಿಸಲು ಯತ್ನಿಸುವುದು. ಒಬ್ಬನ ದೃಷ್ಟಿ ಇನ್ನೊಬ್ಬನ ಕಣ್ಣುಗಳ ಮೇಲೆ ಎರಗಿದಾಗ ಅವನ ಕಣ್ಣುಗಳು ಅಂಜದೆ, ಅಳುಕದೆ, ಎವೆ ಮಿಟಕಿಸದೆ ಆ ದೃಷ್ಟಿಯನ್ನು ಎದುರಿಸಬೇಕು ; ಕಣ್ಣುಗಳು ಅತ್ತಿತ್ತ ಹರಿಯಬಾರದು, ರೆಪ್ಪೆ ಬಡಿಯಬಾರದು. ಕಣ್ಣುಗಳು ದೃಷ್ಟಿಯನ್ನು ಎದುರಿಸಲಾರದೆ ಅಲುಗಾಡಿದರೆ ಅವನು ಸೋತಂತೆ. ಈ ದೃಷ್ಟಿ ಯುದ್ಧದಲ್ಲಿ ಬಾಹುಬಲಿಯೇ ಗೆದ್ದ.

ಹೀಗೆಯೇ ಜಲಯುದ್ಧ, ಬಾಹುಯುದ್ಧ, ಮಲ್ಲಯುದ್ಧ, ಖಡ್ಗ ಯುದ್ಧ ಮೊದಲಾದುವು ನಡೆದುವು. ಮೊದಮೊದಲು ಇವರಿಬ್ಬರೇ ಕಾದಾಡಿದರು; ಎರಡೂ ಕಡೆಯ ಸೇನೆಗಳು ಸುಮ್ಮನೆ ನೋಡುತ್ತ ನಿಂತಿದ್ದುವು. ಇವರಿಬ್ಬರ ಹಗರಣದಲ್ಲಿ ಸೇನೆಗಳಿಗೆ ತೊಂದರೆಯಾಗುವುದು ಯಾವ ನ್ಯಾಯ, ಅಲ್ಲವೆ? ಮೊದಲ ಸೋಲು–ಗೆಲವುಗಳು ಇವರಿಬ್ಬರಿಂದಲೇ ನಿರ್ಧರಿಸಲ್ಪಡಬೇಕು; ಅದಕ್ಕೂ ಮೀರಿದರೆ, ಅನಿವಾರ್ಯವಾಗಿ, ಸೇನೆಗಳು ಹೋರಾಡಬೇಕು. ಭರತ–ಬಾಹುಬಲಿ ಇಬ್ಬರೂ ಕುಸ್ತಿಮಾಡಿ ಸೆಣಸಿದರು; ಕತ್ತಿ–ಗುರಾಣಿಗಳು, ಬಿಲ್ಲುಬಾಣಗಳು, ಈಟಿ–ಭರ್ಜಿಗಳು, ಮಾಯ–ಮಂತ್ರ ಇವುಗಳಿಂದ ಸೆಣಸಿದರು.

ನೆರೆದ ಜನರೆಲ್ಲ ಬೆರಗಾಗಿ, ಎವೆಯಿಕ್ಕದೆ, ಕುತೂಹಲದಿಂದ ನೋಡುತ್ತ ನಿಂತಿದ್ದರು. ಯಾರು ಗೆಲ್ಲುವರೆಂಬ ಸುಳಿವು ಕಡೆಯವರೆಗೂ ತಿಳಿಯುವಂತಿರಲಿಲ್ಲ. ಇಬ್ಬರೂ ವೀರರು, ಶೂರರು, ಸಮರ್ಥರು, ಜಾಣರು; ಎಲ್ಲ ಬಗೆಯ ಕಾದಾಟಗಳಲ್ಲಿಯೂ ಗಟ್ಟಿಗರು. ಕಡೆಗೆ ಎಲ್ಲದರಲ್ಲಿಯೂ ಬಾಹುಬಲಿಯ ಕೈಯೇ ಮೇಲಾಯಿತು. ಕಡೆಯ ಹೋರಾಟದಲ್ಲಿ ಬಾಹುಬಲಿ



ತನ್ನಣ್ಣ ಭರತನನ್ನು ಮೇಲಕ್ಕೆತ್ತಿ ಕೆಳಗೆ ಕುಕ್ಕಿದ ; ಪೆಟ್ಟಿನ ರಭಸದಿಂದ ಭರತ ಮೇಲೇಳಲಾರದೆ ಮಲಗಿದ. ಬಾಹುಬಲಿ ನಸುನಗುತ್ತ ವೀರಾವೇಶದಿಂದ ಭುಜಗಳನ್ನು ತಟ್ಟಿಕೊಂಡು ನಿಂತ. ಜನರೆಲ್ಲರೂ 'ಬಾಹುಬಲಿಗೆ ಜಯು !', 'ಬಾಹುಬಲಿಗೆ ಜಯು !' ಎಂದು ಕೂಗತೊಡಗಿದರು.

ಬವಳಿ ಬಂದು ಅರಿವಿಲ್ಲದೆ ಮಲಗಿದ್ದ ಭರತ ಈ ಕೂಗಿನಿಂದ ಎಚ್ಚೆತ್ತ. ವೀರನಂತೆ ಮೆರೆಯುತ್ತ ನಿಂತಿದ್ದ ತಮ್ಮ ಬಾಹುಬಲಿಯನ್ನು ನೋಡಿದ. ಆದ ಅಪಮಾನ ಅವನಿಂದ ಸಹಿಸುವುದಾಗಲಿಲ್ಲ. ಚಕ್ರೇಶ್ವರನಾದ, ಸಮಸ್ತ ಭೂಮಂಡಲವನ್ನೂ ತನ್ನ ವಶಮಾಡಿಕೊಂಡ ತಾನು ತನ್ನ ತಮ್ಮನಿಗೆ ಸೋಲುವುದೇ ? ಅದೂ, ಊರಜನರೆಲ್ಲರ ಎದುರಿನಲ್ಲಿ ? ತನ್ನ ಸೇನೆಯೆಲ್ಲ ನೋಡುತ್ತಿರುವಾಗ ? ಬಾಹುಬಲಿ ನಿಂತಿದ್ದು, ತಾನು ಮಣ್ಣುಮುಕ್ಕಿ ನೆಲಕ್ಕೆ ಕುಸಿದುದು ಅವನ ಎದೆಗೆ ಈಟಿಯನ್ನು ಇರಿದಂತಾಯಿತು. ತನಗಾದ ಸೋಲು ಸಿಟ್ಟಿಗೆಡೆಮಾಡಿಕೊಟ್ಟಿತು. ಒಡನೆಯೇ ಹಿಂದೆಮುಂದೆ ನೋಡದೆ ತನ್ನಲ್ಲಿದ್ದ ಚಕ್ರರತ್ನವನ್ನು ಬಾಹುಬಲಿಯೆಡೆಗೆ ಎಸೆದ. ಬಾಹುಬಲಿಯ ಬಳಿ ಈ ಆಯುಧ ಇಲ್ಲದುದರಿಂದ ಇದು ನ್ಯಾಯವಾಗಿರಲಿಲ್ಲ; ಕಾದಾಟದ ನಿಯ



ಮಕ್ಕೆ ಇದು ಸಮನಾಗಿರಲಿಲ್ಲ. ಆದರೆ ಸಿಟ್ಟಿಗೆದ್ದವನು ನ್ಯಾಯ–ಅನ್ಯಾಯ ಗಳನ್ನು ಗಮನಿಸುವನೆ? ಸಿಟ್ಟು ಮನುಷ್ಯನನ್ನು ಕುರುಡುಮಾಡುತ್ತದೆ. ಆ ಚಕ್ರರತ್ನವೋ ತುಂಬ ಬಲವಾದ ಶಸ್ತ್ರ; ಅದಕ್ಕೆ ಸೋಲು ಎಂಬುದೇ ಇರದು; ಯಾವ ಆಯುಧವೂ ಯಾವ ಸೇನೆಯೂ ಅದನ್ನು ಎದುರಿಸ ಲಾರದು.

ಅದು ರೊಯ್ಯನೆ ಬೀಸುತ್ತ, ಗಿರ್ರನೆ ತಿರುಗುತ್ತ ಬಾಹುಬಲಿಯ ಮೈಮೇಲೆ ಎರಗಿಬಂದಿತು. ಆದರೆ ಅವನ ಮೈ ಸೋಕಿದೊಡನೆ ಸಪ್ಪೆಯಾಗಿ ಕೆಳಗೆ ಬಿದ್ದುಬಿಟ್ಟಿತು. ಬಾಹುಬಲಿಯದು ವಜ್ರದೇಹ; ಅದನ್ನು ಚಕ್ರ ರತ್ನವೇನು ಮಾಡೀತು? ಅಷ್ಟು ಮಾತ್ರವಲ್ಲದೆ, ನ್ಯಾಯವಿದ್ದುದು ಬಾಹು ಬಲಿಯ ಕಡೆ. ನ್ಯಾಯ–ಅನ್ಯಾಯಗಳ ವಿವೇಚನೆಯನ್ನು ಚಕ್ರರತ್ನದ ಒಡೆಯ ಭರತ ಮರೆತರೂ, ಆ ನಿಯಮಕ್ಕೆ ಚಕ್ರರತ್ನ ಒಳಗಾದುದೇ. ನ್ಯಾಯವಿರದೆಡೆ ಗೆಲುವು ಎಲ್ಲಿಯದು ? ಚಕ್ರರತ್ನ ಸಾರ್ಥಕವಾಗುವುದು ಧರ್ಮಯುದ್ಧದಲ್ಲಿ ಅಷ್ಟೆ. ನ್ಯಾಯ, ನೀತಿ, ನಿಯಮಗಳಿಗೆ ಅಡ್ಡಿಮಾಡ ಲಾರದು ಅದು. ಬಾಹುಬಲಿಯ ಮೈಗೆ ಗಾಸಿ ಮಾಡಲಾರದೆ ಕೆಳಗೆ ಬಿದ್ದ ಚಕ್ರರತ್ನ ಮತ್ತೆ ಮೇಲೆದ್ದು ಬಾಹುಬಲಿಯ ತಲೆಯ ಸುತ್ತ ಮೂರುಬಾರಿ ಸುತ್ತಿ ಅವನ ಪಕ್ಕದಲ್ಲಿ ನಿಂತಿತು. ಇದು ಬಾಹುಬಲಿಯೇ ಈಗ ಚಕ್ರದ ಒಡೆಯ, ಚಕ್ರೇಶ್ವರ, ಚಕ್ರವರ್ತಿಯೆನ್ನುವ ಸೂಚನೆ. ಇದು ಎಲ್ಲರಿಗೂ ಸ್ಪಷ್ಟವಾಯಿತು.

ಭರತನಿಗೂ ಇದರ ಅರಿವಾಯಿತು. ಅವನ ಸಿಟ್ಟು ಇಳಿಯಿತು. ಸೋಲನ್ನು ಅವನು ಅನುಭವಿಸಿದುದು ಇದೇ ಮೊದಲು; ಅವನಿಗೆ ಅಲ್ಲಿಯ ವರೆಗೆ ಎದುರಾದವರೇ ಇರಲಿಲ್ಲ. ಈಗ ಹೀಗಾದಾಗ ಸಿಟ್ಟು ಬಂದುದು ಸಹಜವೇ. ಆದರೆ ಅವನು ಎಂದೂ ಧರ್ಮಕ್ಕೆ ತಲೆಬಾಗಿ ನಡೆದುಕೊಳ್ಳು ವವನು; ಯಾವ ಬಗೆಯಲ್ಲಿಯೂ ದುಷ್ಟನಲ್ಲ, ದುರಾಚಾರಿಯಲ್ಲ. ತಮ್ಮ ನಾದ ಬಾಹುಬಲಿಯೆಂದರೆ ಪ್ರೀತಿಯೂ ಇದ್ದಿತು. ಅಲ್ಲಿಯವರೆಗೆ ಅಣ್ಣ ತಮ್ಮಂದಿರು ಅನ್ಯೋನ್ಯವಾಗಿಯೇ ಇದ್ದರು. ಈಗ ಸಿಟ್ಟು ಬಂದಿದ್ದುದು ತಾನು ಚಕ್ರವರ್ತಿಯೆನ್ನುವ ಅಭಿಮಾನ ಮೇರೆ ಮೀರಿ ಹರಿದಾಗ.

ಭರತನಿಗೆ ತನ್ನ ತಪ್ಪಿನ ಅರಿವಾದೊಡನೆ ಬಾಹುಬಲಿಯನ್ನು ಕುರಿತು, "ತಮ್ಮಾ, ನಿನ್ನೊಂದಿಗೆ ಕಾದಾಡಿದುದು ಸರಿಯೆ? ನನ್ನ ಸ್ವಾಭಿಮಾನವನ್ನು ಸರಿಯಾದ ಅಂಕೆಯಲ್ಲಿರಿಸಿಕೊಳ್ಳದೆ ತಪ್ಪು ಮಾಡಿದೆ. ತಪ್ಪಿಗೆ ತಕ್ಕ ಶಾಸ್ತಿ

ಯಾಯಿತು. ನಿನ್ನಿಂದ ನಾನು ಸೋತುದಕ್ಕೆ ನನಗೇನು ದುಃಖವಿಲ್ಲ. ನಿನ್ನ ಪರಾಕ್ರಮ ಲೋಕಕ್ಕೆ ತಿಳಿಯಿತೆಂದು ಸಂತೋಷವೇ. ಇನ್ನು ಮುಂದೆ ನೀನು ಚಕ್ರವರ್ತಿಯಾಗಿರುವುದು ನನಗೆ ಹಿತವೇ. ಆಡಳಿತವು ಸಮರ್ಥ ರಾದವರ ಕೈಲಿದ್ದರೇ ಚೆನ್ನು. ಬೇಗ ರಾಜ್ಯಾಭಿಷೇಕಕ್ಕೆ ಸಿದ್ಧತೆ ಮಾಡುವಾ, ಇದು ಎಲ್ಲರಿಗೂ ಸಂತೋಷದ ಸಂದರ್ಭ" ಎಂದ.

ಆದರೆ ಭರತ ಸೋತು ನೆಲಕ್ಕೆ ಒರಗಿದಾಗಿನಿಂದಲೂ ಬಾಹುಬಲಿಯ ಮುಖದಲ್ಲಿ ಕರಿಮೋಡ ಮೂಡಿದ್ದಿತು. ತಾನು ಗೆದ್ದೆನೆಂಬ ಹೆಮ್ಮೆಯಾಗಲೀ ಸಂತೋಷವಾಗಲೀ ಅವನ ಪಾಲಿಗೆ ಬರಲಿಲ್ಲ. ಒಂದು ಹಿಡಿ ಮಣ್ಣಿಗಾಗಿ, ಒಂದು ಅಡಿ ನೆಲಕ್ಕಾಗಿ ಮನುಷ್ಯ ಎಷ್ಟೊಂದು ಬವಣೆ ಪಡುತ್ತಾನೆ? ಶಾಂತಿ, ಪ್ರೀತಿಗಳನ್ನೆಲ್ಲ ಮರೆತು ರಾಗ, ದ್ವೇಷಗಳನ್ನು ಮುಂದೆ ಮಾಡಿಕೊಂಡು ಸೋದರನನ್ನೇ ಇರಿಯಲು ಹೊರಡುವನಲ್ಲ! ಮನಸ್ಸನ್ನು ನಿಲ್ಲಿಸುವುದು ಕಷ್ಟ. ಆದರೆ ಮನಸ್ಸನ್ನು ನಿಲ್ಲಿಸದೆ ದಿಟವಾದ ಲಾಭವಿರದು. ಹೀಗೆಲ್ಲ ಬಾಹುಬಲಿ ಆಲೋಚಿಸುತ್ತಿದ್ದ. ಭರತನನ್ನು ಕುರಿತು "ಅಣ್ಣಾ, ನಿನಗೆ ಅಹಿತವೆನಿಸುವಂತೆ ನಡೆದುಕೊಂಡ ತಪ್ಪು ನನ್ನದು. ನನ್ನ ಮನಸ್ಸು ರಾಜ್ಯ ಭಾರದ ಮೇಲಿಲ್ಲ. ನನಗೆ ತಪಸ್ಸು ಮಾಡಬೇಕೆಂಬ ತವಕವಿದೆ. ನಿನಗೆ ಆಡ ಳಿತದ ಅನುಭವವಿದೆ. ಆದುದನ್ನು ಮರೆತು, ಮುಂದೆಯೂ ಅರಸನಾಗಿ ಆಳು, ನನ್ನನ್ನು ಬಿಟ್ಟುಕೊಡು" ಎಂದು ಕೇಳಿಕೊಂಡ.

ಭರತನಿಗೆ ಮಾತ್ರವಲ್ಲ, ನೆರೆದಿದ್ದ ಎಲ್ಲರಿಗೂ ಈ ಮಾತು ಕೇಳಿ ಆಶ್ಚರ್ಯವಾಯಿತು. ಗೆಲುವಿನಲ್ಲಿ ಜನ ಮೈಮರೆಯುವುದು ವಾಡಿಕೆ; ತಲೆಯೆತ್ತಿ, ಎದೆಯುಬ್ಬಿಸಿ, ವೀರಾವೇಶದ ಮಾತನಾಡುವುದು ವಾಡಿಕೆ; ಸೋತವನನ್ನು ಹಂಗಿಸುವುದು, ಅವನಿಗೆ ಅಪಮಾನಮಾಡುವುದು ವಾಡಿಕೆ. ಆದರೆ ಬಾಹುಬಲಿ ಗೆಲುವಿನಲ್ಲಿ ಸೋತಂತೆ ತೋರಿದ.

ಕುಕ್ಕುಟೇಶ್ವರ-ಜಿನ

ಅಣ್ಣತಮ್ಮಂದಿರಲ್ಲಿ ಕೊಂಚ ಹೊತ್ತು ಮಾತುಕತೆ ನಡೆಯಿತು. ಭರತನೇ ಚಕ್ರವರ್ತಿಯಾಗಿರಲೆಂದು ಬಾಹುಬಲಿ, ನ್ಯಾಯವಾಗಿ ವಿಜಯಿಯಾದ ಬಾಹುಬಲಿಯೇ ಚಕ್ರವರ್ತಿಯಾಗಬೇಕೆಂದು ಭರತ–ಹೀಗೆ ಇಬ್ಬರೂ ವಾದ

ಮಾಡಿದರು. ಕಡೆಗೆ ಈ ವಾಗ್ಯುದ್ಧದಲ್ಲಿಯೂ ಬಾಹುಬಲಿಯೇ ಗೆದ್ದ ; ಅವನದು ದೃಢನಿಶ್ಚಯವಾಗಿದ್ದಿತು. ಜಗತ್ತಿನ ಬಗೆಗೆ ತುಂಬ ಬೇಸರ ಬಂದು, ವಿರಕ್ತನಾಗಿಬಿಟ್ಟಿದ್ದ ಅವನು. ಭರತನಿಂದಲೂ ನೆರೆದ ಜನರಿಂದಲೂ ಬೀಳ್ಕೊಡುಗೆಯನ್ನು ಕೈಗೊಂಡು ಬಾಹುಬಲಿ ಕಾಡಿನ ಕಡೆ ನಡೆದುಬಿಟ್ಟ.

ಕಾಡಿನ ನಡುವೆ, ಜನರು ಬರಲು ಅಸಾಧ್ಯವೆನಿಸಿದ ಸ್ಥಳದಲ್ಲಿ ನಿಂತ. ಎಲ್ಲ ಜೀವಿಗಳಿಗೂ ಅಭಯವನ್ನು ಕೊಟ್ಟು, ಸ್ನೇಹವನ್ನು ಬೇಡಿ, ಅಲ್ಲಿಯೇ ತಪಶ್ಚರ್ಯೆಗೆ ಸಿದ್ಧನಾದ. ನೆಟ್ಟಗೆ ನಿಂತುಕೊಂಡು ಮಾಡುವ ತಪಸ್ಸಿಗೆ ಕಾಯೋತ್ಸರ್ಗವೆಂದು ಹೆಸರು. ಬಿಸಿಲಾಗಲೀ ಮಳೆಯಾಗಲೀ, ಚಳಿಯಿರಲಿ ಗಾಳಿಯಿರಲಿ, ಬೇನೆಯಾಗಲಿ ಬವಣೆಯಾಗಲಿ, ನಿಂತ ಭಂಗಿಯನ್ನು ಬಿಡಿಸದೆ, ಅಲ್ಲಿಂದ ಕದಲದೆ ನಿಲ್ಲುವುದು ; ಹಸಿವಾಗಲಿ ನೀರಡಿಕೆಯಾಗಲಿ, ಆಯಾಸ ವಾಗಲಿ ಬೇಸರವಾಗಲಿ ಕೂಡುವ ಹಾಗಿಲ್ಲ, ಮಲಗುವ ಹಾಗಿಲ್ಲ, ಉಣ್ಣುವ ಹಾಗಿಲ್ಲ, ನೀರು ಕುಡಿಯುವ ಹಾಗಿಲ್ಲ. ಇದು ಕಾಯೋತ್ಸರ್ಗ. ಬಯಕೆಗಳ ನ್ನೆಲ್ಲ ಬಿಗಿಹಿಡಿದು, ಮನಸ್ಸನ್ನು ನಿಲ್ಲಿಸಿ, ಚಿತ್ತವನ್ನು ಕೈವಲ್ಯದಲ್ಲಿ ಮೂಡಿ ಸುವ ಈ ಸಾಧನೆ ಕಠೋರವಾದುದು.

ಬಾಹುಬಲಿ ಇದನ್ನು ಕೈಗೊಂಡು ವರ್ಷಗಳವರೆಗೆ ನಡೆಸಿದ. ಮೈಮೇಲಿದ್ದ ಬಟ್ಟೆ ಬಿಸಿಲಿಗೆ ಮಳೆಗೆ ಗಾಳಿಗೆ ಸಿಕ್ಕಿ ಚಿಂದಿಚಿಂದಿಯಾಗಿ ಬಿದ್ದಿತು ; ಅಲ್ಲಿಂದಾಚೆ ಅವನು ಬಟ್ಟಬತ್ತಲೆ, ದಿಗಂಬರ. ಒಂದೆರಡು ವರ್ಷ ಕಳೆದರೂ ಸಿದ್ಧಿ ಮುಟ್ಟಲಿಲ್ಲ. ಅದಕ್ಕೆ ಕಾರಣ, ಬಾಹುಬಲಿಯ ಮನಸ್ಸಿನಲ್ಲಿ ಒಂದು ಆತಂಕವಿದ್ದಿತು. ತಾನು ಎಲ್ಲವನ್ನೂ ತ್ಯಾಗಮಾಡಿ, ಏನನ್ನೂ ಯಾರಿಂದಲೂ ಬಯಸದೆ, ತನ್ನದೆನ್ನುವ ಯಾವ ವಸ್ತುವನ್ನೂ ಇರಿಸಿಕೊಳ್ಳದೆ ತಪಸ್ಸು ಮಾಡಬೇಕೆಂದು ನಿಂತ ಬಾಹುಬಲಿ, ತಾನು ಇಲ್ಲಿಗೆ ಬರುವ ಮೊದಲು ತನ್ನ ರಾಜ್ಯವನ್ನೂ ಭರತನಿಂದ ಗೆದ್ದುಕೊಂಡ ರಾಜ್ಯವನ್ನೂ, ಆಡಳಿತ, ಅಧಿಕಾರ, ಐಶ್ವರ್ಯ, ವೈಭವ ಎಲ್ಲವನ್ನೂ ಭರತನಿಗೆ ಧಾರೆಯೆರೆದಿದ್ದ. ಆದರೆ ತಾನು ನಿಂತಷ್ಟು ಜಾಗ ಮಾತ್ರ ತಾನೇ ಇರಿಸಿಕೊಂಡಿದ್ದನಲ್ಲವೆ ? ಅದು ಇನ್ನೂ ತನ್ನದೇ ಆಗಿದ್ದಿತು. ಹೀಗಿರುವಾಗ, ತಾನು ಸರ್ವತ್ಯಾಗಮಾಡಿದವನಲ್ಲ, ತನಗೆ ಮುಕ್ತಿ ಹೇಗೆ ಸಿಗಬೇಕು ? ಅಥವಾ ಇಡೀ ರಾಜ್ಯವನ್ನೇ ಅಣ್ಣನಿಗೆ ಧಾರೆಯೆರೆದು ಕೊಟ್ಟಾಗ ನೆಲವೂ ಸೇರಿತಲ್ಲವೆ? ಈಗ ಅವನ ಅಪ್ಪಣೆ ಯಿಲ್ಲದೆ ತಾನು ಅದನ್ನು ಆಕ್ರಮಿಸಿಕೊಂಡು ನಿಂತಿರುವುದು 'ಅಪರಿಗ್ರಹ'ವೆನಿಸೀತೆ ? ತನಗೆ ಸೇರದಿದ್ದ ಒಂದು ವಸ್ತುವನ್ನು ತಾನು ಅನುಭವಿ

ಸುವುದು ಕಳ್ಳತನಮಾಡಿದಂತಲ್ಲವೆ ? ಇದು ಅವನ ಮನಸ್ಸನ್ನು ಕೊರೆಯು ತ್ತಿದ್ದಿತು.

ಇದನ್ನು ಹೇಗೋ ಅರಿತ ಭರತ ಒಡನೆಯೇ ಬಾಹುಬಲಿಯಿದ್ದಲ್ಲಿಗೆ ಬಂದು, "ನಾನು ಚಕ್ರವರ್ತಿಯಾದುದರಿಂದ ಈ ಎಲ್ಲ ನೆಲವೂ ನನಗೇ ಸೇರಿದ್ದು; ನಿನ್ನದೆಂಬುದು ಏನೂ ಇರದು. ನೀನು ಈಗ ನಿಂತಿರುವಷ್ಟು ನೆಲವೂ ದಿಟ ವಾಗಿ ನನ್ನದೇ ಅಲ್ಲವೆ ? ಇಡೀ ಭೂಮಿಯನ್ನೇ ನನಗೆ ನೀನು ಧಾರೆಯೆರೆದ ಮೇಲೆ ಇಷ್ಟು ನೆಲವನ್ನು ಬಿಡುವುದು ಹೇಗೆ ? ನಿನ್ನದಲ್ಲದ ಭೂಮಿಯ ಮೇಲೆ ನೀನು ನಿಂತಿದ್ದೀಯೆಂದು ನಿನಗೆ ಆತಂಕವಾದರೆ, ಇಗೋ, ನೀನು ನಿಂತಿರುವಷ್ಟಗಲ ಭೂಮಿಯನ್ನು ನಿನಗೆ ದಾನ ಮಾಡುತ್ತಿದ್ದೇನೆ ; ಇದನ್ನು ದಾನವಾಗಿ ಸ್ವೀಕರಿಸು. ನೆಮ್ಮದಿಯಿಂದ ತಪಸ್ಸು–ಮಾಡಿ ಮುಕ್ತಿಯನ್ನು ಪಡೆದುಕೋ"ಎಂದು ಸಮಾಧಾನ ಮಾಡಿದನು.

ಅನಂತರ ಬಾಹುಬಲಿ ಯಾವೊಂದು ಅಡಚಣೆಯೂ ಇಲ್ಲದೆ ತಪಸ್ಸನ್ನು ಪೂರೈಸಿ ಜಿನನಾದನು. ಅವನು ಎಷ್ಟು ದೀರ್ಘಕಾಲ, ಎಷ್ಟು ಜಡನಾಗಿ ನಿಂತಿದ್ದನೆಂದರೆ ಕಾಲುಗಳಮೇಲೆಲ್ಲ ಹಾವಿನ ಹುತ್ತಗಳು ಬೆಳೆದವು, ಅದರಲ್ಲಿ ಹಾವುಗಳು ಮನೆಮಾಡಿಕೊಂಡುವು. ಇದೊಂದರ ಪರಿವೆಯೂ ಬಾಹು ಬಲಿಗೆ ಇರಲೇ ಇಲ್ಲ. ಕುಕ್ಕುಟಸರ್ಪಗಳು ಈ ಮುನಿಯ ಕಾಲುಗಳ ಮೇಲೆಲ್ಲ ಅಡ್ಡಿ ಆತಂಕಗಳಿಲ್ಲದೆ ಹರಿದಾಡುತ್ತಿದ್ದುದರಿಂದ ಇವನನ್ನು 'ಕುಕ್ಕು ಟೇಶ್ವರ'ನೆಂದೇ ಜನ ಕರೆಯತೊಡಗಿದರು.

ಹೀಗೆ ಬಾಹುಬಲಿ ತಪಶ್ಚರ್ಯೆಯನ್ನು ಮುಗಿಸಿ ಜಿನನಾದಂದು, ಅಣ್ಣ ಭರತ–ಚಕ್ರವರ್ತಿ ಬಂದು ಭಕ್ತಿಯಿಂದ ಅವನ ಪೂಜೆ ಮಾಡಿದನು. ಈ ಸಂದರ್ಭದ ನೆನಪಿಗಾಗಿ ಪೋದನಪುರದಲ್ಲಿ ಬಾಹುಬಲಿಯ ಬಂಗಾರದ ಮೂರ್ತಿಯೊಂದನ್ನು ಮಾಡಿಸಿಟ್ಟನು. ಈ ಮೂರ್ತಿಯ ಪ್ರಮಾಣ ಬೆರಗು ಗೊಳಿಸುವಂಥದು ; ಐನೂರ ಇಪ್ಪತ್ತೈದು ಧನಸ್ಸುಗಳು (ಎಂದರೆ ಅಷ್ಟು ಬಿಲ್ಲುಗಳನ್ನು ಒಂದರ ತುದಿಯ ಮೇಲೊಂದರಂತೆ ನೆಟ್ಟಗೆ ನಿಲ್ಲಿಸಿದರೆ ಎಷ್ಟುದ್ದವಾಗುವುದೋ ಅಷ್ಟು). ಧನುಸ್ಸಿನ ಪ್ರಮಾಣವೆಂದರೆ ಮೂರೂ ವರೆ ಮೊಳ. ಸಹಜವಾಗಿಯೇ ಈ ಮೂರ್ತಿ ಲೋಕಪ್ರಸಿದ್ಧವಾಯಿತು. ನಾಡ ಜನರೆಲ್ಲ ಬಂದು ಇದನ್ನು ನೋಡಿ ಬೆರಗಾಗಿ, ಸಂತೋಷಪಟ್ಟು ಹೋಗ ತೊಡಗಿದರು. ಬಾಹುಬಲಿ ಅಥವಾ ಕುಕ್ಕುಟೇಶ್ವರ ಈಗ ಸುವಿಖ್ಯಾತನಾದ ಸಂತನಾದ.

ಈ ಮೂರ್ತಿಯಿದ್ದ ಪೋದನಪುರ ಯಾವುದು ? ಈಗ ನಾವು ಗುರುತಿಸುವುದು ಕಷ್ಟ. ಏಕೆ ಬಲ್ಲಿರಾ ? ಬಾಹುಬಲಿಯು, ಭರತಚಕ್ರವರ್ತಿಯು ಕಾಲವಾದ ಸಾವಿರಾರು ವರ್ಷಗಳ ಮೇಲೆ ಆ ಊರು ಕಾಡಾಯಿತು. ಮೂರ್ತಿಯಿದ್ದ ಸ್ಥಳ ಹುಲಿ, ಸಿಂಹ, ಚಿರತೆಗಳ ವಾಸಸ್ಥಳವಾಯಿತು; ಸುತ್ತಲೂ ದಟ್ಟವಾದ ಕಾಡು ಬೆಳೆದು ಜನ ಅಲ್ಲಿಗೆ ಹೋಗಿಬರುವುದು ಅಸಾಧ್ಯವಾಯಿತು. ಹೀಗಾಗಿ ಬರುಬರುತ್ತ ಈ ಬಾಹುಬಲಿಮೂರ್ತಿಯ ಪ್ರಖ್ಯಾತಿ ಜನರ ನೆನಪಿನಲ್ಲಿ ಮಾತ್ರ ಉಳಿಯಿತು. ಮುಂದೆ ನೂರಾರು ವರ್ಷಗಳಲ್ಲಿ ಈ ನೆನಪೂ ಜನರ ಮನಸ್ಸಿನಿಂದ ಜಾರಿತು ; ಪುರಾಣಗಳಲ್ಲಿ ಮಾತ್ರ ಪ್ರಖ್ಯಾತಿ ನಿಂತಿತು.

ಕೆಲವರ ಅಭಿಪ್ರಾಯದಂತೆ, ಈಗ ಆಂಧ್ರಪ್ರದೇಶಕ್ಕೆ ಸೇರಿರುವ ಬೋದನ್ ಎಂಬ ಹಳ್ಳಿಯೇ ಹಿಂದೆ ಪೋದನಪುರವಾಗಿದ್ದುದು. ಇದು ಒಂದು ಕಾಲಕ್ಕೆ ಸುಪ್ರಸಿದ್ಧ ಜೈನ ಕ್ಷೇತ್ರವಾಗಿದ್ದುದೇನೋ ದಿಟ ; ನಿತ್ಯವರ್ಷ–ಇಂದ್ರವಲ್ಲಭ (915–927) ಎಂಬ ರಾಷ್ಟ್ರಕೂಟ ರಾಜನ ರಾಜಧಾನಿಯೂ ಆಗಿದ್ದಿತು. ಕ್ರಿಸ್ತಾಬ್ದ ಹತ್ತನೆಯ ಶತಮಾನದವರೆಗೆ ಜೈನರ ಯಾತ್ರಾಸ್ಥಳವೂ ಆಗಿದ್ದಿತು. ಆದರೆ ಈಗ ಅಲ್ಲಿ ಯಾವ ಪ್ರತಿಮೆಯೂ ಉಳಿದಿಲ್ಲ.

ಚಾವುಂಡರಾಯನ ಸಾಹಸ

ಬಾಹುಬಲಿಯ ಹೆಸರೂ ಪ್ರಸಿದ್ಧಿಯೂ ಲೋಕದಲ್ಲಿ ಉಳಿದು ಬಂದುದು ಈ ಪ್ರಸಂಗವಾದ ಬಹುಕಾಲದ ಮೇಲೆ, ಚಾವುಂಡರಾಯನ ಕಾಲದಲ್ಲಿ. ಚಾವುಂಡರಾಯ ಯಾರು ? ಕನ್ನಡ ನಾಡಿನಲ್ಲಿ ಗಂಗರಾಜರು ಆಳುತ್ತಿದ್ದಾಗ, ಕ್ರಿಸ್ತಾಬ್ದ 960ರ ಸುಮಾರಿಗೆ, ಎಂದರೆ ಈಗ್ಗೆ ಒಂದು ಸಾವಿರವರ್ಷಗಳ ಹಿಂದೆ, ಅವರ ಮಹಾಸಾಮಂತನೂ ದಂಡನಾಯಕನೂ ಆಗಿದ್ದವನು. ಈ ರಾಜರಲ್ಲಿ ಮೂವರಿಗೆ, ಮಾರಸಿಂಹ (961–974), ನಾಲ್ಕನೆಯ ರಾಚಮಲ್ಲ (974–977)ಮತ್ತು ರಕ್ಕಸಗಂಗ (977–984) ಇವರಿಗೆ ಅವನು ಮಹಾಸಾಮಂತ, ಎಂದರೆ ಮುಖ್ಯಮಂತ್ರಿ, ಮತ್ತು ದಂಡನಾಯಕ ಎಂದರೆ ಅವರ ಸೇನೆಗಳಿಗೆ ಒಡೆಯ. ಅವನು 'ಬ್ರಹ್ಮಕ್ಷತ್ರಕುಲ'ದವನು ; 'ಗಂಗವಂಶ ಲಲಾಮ', 'ಗಂಗಕುಲ ಚೂಡಾಮಣಿ'.

ಅವನು ಯುದ್ಧದಲ್ಲಿ ವೀರ. ನೊಳಂಬರನ್ನೂ, ರಾಚಯ, ವಜ್ಜಳ, ಗೋವಿಂದರಸ ಮೊದಲಾದ ಅರಸರನ್ನೂ ಗೆದ್ದು ಗಂಗರಾಜರ ಕೀರ್ತಿಯನ್ನು ಹೆಚ್ಚಿಸಿದ. ಅವನ ಬಿರುದುಗಳಲ್ಲಿ 'ವೀರಮಾರ್ತಂಡ', 'ಜಗದೇಕವೀರ', 'ಸಮರ ಧುರಂಧರ', 'ಪ್ರತಿಪಕ್ಷರಾಕ್ಷಸ', 'ರಣರಂಗಸಿಂಹ' ಎಂಬ ವರ್ಣನೆಗಳಿದ್ದುವು. ಅವನು ಯುದ್ಧದಲ್ಲಿ, ಎಷ್ಟು ವೀರನೋ ಅಷ್ಟೇ ಸುಸಂಸ್ಕೃತ. ಅವನಿಗೆ ಕಾವ್ಯಗಳಲ್ಲಿ ತುಂಬ ಆಸಕ್ತಿಯಿದ್ದು ಕವಿಗಳನ್ನು ಪ್ರೋತ್ಸಾಹಿಸುತ್ತಿದ್ದ. ಅವನಿಗೆ 'ಕವಿಜನಶೇಖರ'ನೆಂಬ ಬಿರುದೂ ಇದ್ದಿತು. ಕನ್ನಡ ಸಾಹಿತ್ಯದಲ್ಲಿ ಸೊಗಸಾದ ಕಾವ್ಯವೆನಿಸಿದ 'ಗದಾಯುದ್ಧ'ವನ್ನು ಬರೆದ ರನ್ನನನ್ನು ಇವನೇ ಉತ್ತೇಜಿಸಿದವನು. ನೇಮಿಚಂದ್ರನು ಪ್ರಾಕೃತದಲ್ಲಿ 'ಗೊಮ್ಮಟಸಾರ'ವನ್ನು ಬರೆಯುವಂತೆ ಪ್ರೇರಿಸಿದುದು ಮಾತ್ರವಲ್ಲದೆ, ಅದರ ಮೇಲೆ ತಾನೇ ಕನ್ನಡ ಟೀಕೆಯೊಂದನ್ನು ಸಿದ್ಧಪಡಿಸಿದನಂತೆ. ಅಷ್ಟು ಮಾತ್ರವಲ್ಲದೆ, ಸಂಸ್ಕೃತದಲ್ಲಿ 'ಚರಿತ್ರಸಾರ'ವನ್ನು, ಕನ್ನಡದಲ್ಲಿ 'ತ್ರಿಷಷ್ಟಿಲಕ್ಷಣಮಹಾಪುರಾಣ'ವನ್ನೂ ರಚಿಸಿದ್ದಾನೆ. ಈ ಎರಡನೆಯ ಪುಸ್ತಕ 'ಚಾವುಂಡರಾಯಪುರಾಣ'ವೆಂದೇ ಪ್ರಸಿದ್ಧವಾಗಿದೆ.

ಯುದ್ಧದಲ್ಲಿ ವೀರ, ಸಾಹಿತ್ಯದಲ್ಲಿ ಗಟ್ಟಿಗ; ಧರ್ಮದಲ್ಲೋ? ಅದರಲ್ಲಿಯೂ ಅವನ ಹಿರಿಮೆಯಿಲ್ಲದೆ ಇಲ್ಲ. ಅವನ ಪ್ರಶಸ್ತಿಗಳಲ್ಲೊಂದು ಹೀಗಿದೆ: 'ಶ್ರೀಮಜ್ಜಿನಸೇನ ಭಟ್ಟಾರಕ-ಶ್ರೀಪಾದಪದ್ಮ ಪ್ರಸಾದಾಸಾದಿತ-ಚತುರಣುಯೋಗ—ಪಾರಾವಾರಪಾರಗ—ಧರ್ಮವಿಜಯಿ— ಶ್ರೀಮಚ್ಚಾಮುಂಡ-ಮಹಾರಾಜ....'. ಅವನ ಗುರು ಜಿನಸೇನ ವಂಶಾವಳಿಯಲ್ಲಿ ಬಂದ ಅಜಿತಸೇನನೆಂಬ ಸುಪ್ರಸಿದ್ಧ ಜೈನಯತಿ. ಇವರು ವಿದ್ಯೆಯಲ್ಲಿಯೂ ಶೀಲದಲ್ಲಿಯೂ ತಪಸ್ಸಿನಲ್ಲಿಯೂ ಎತ್ತಿದ ಕೈ. ಇಂಥವರ ಬಳಿ ವ್ರತದೀಕ್ಷೆಯನ್ನು ಕೈಗೊಂಡ ಚಾವುಂಡರಾಯ ಜೈನಶಾಸ್ತ್ರಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ; ನೋಂಪಿಗಳನ್ನೂ ನಿಷ್ಠೆಯಿಂದ ನಡೆಸಿದ.

ಅವನ ತಾಯಿಗೆ ಒಮ್ಮೆ ಪೋದನಪುರದಲ್ಲಿದ್ದ ಬಾಹುಬಲಿಯ ಬಂಗಾರದ ಮೂರ್ತಿಯನ್ನು ನೋಡಿಕೊಂಡು ಬರಬೇಕೆಂದು ಮನಸ್ಸಾಯಿತು. ತಾಯಿಯ ಹೆಸರು ಕಾಳಿಕಾದೇವಿ. ಆಕೆ ಪುರಾಣ ಶ್ರವಣ ಮಾಡುವಾಗ ಭರತನು ಮಾಡಿಸಿದ್ದ ಈ ಬಾಹುಬಲಿಮೂರ್ತಿಯ ವಿಚಾರ ಕೇಳಿದ್ದಳು. ಅದನ್ನು ನೋಡಿ ಬರಬೇಕೆಂದು ಬಯಸಿ, ಮಗ ಚಾವುಂಡರಾಯನಿಗೆ ತಿಳಿಸಿದಳು. ಚಾವುಂಡರಾಯನು ಆಗಲೆಂದು ಒಪ್ಪಿ ಆಕೆಯೊಡಗೂಡಿ, ಮಿತಪರಿವಾರದೊಂದಿಗೆ

ಹೊರಟ. ಅನೇಕ ಜೈನ ಕ್ಷೇತ್ರಗಳನ್ನು ಸಂದರ್ಶಿಸಿ ಶ್ರವಣಬೆಳ್ಗೊಳಕ್ಕೆ ಈ ಯಾತ್ರಿಕರು ಬಂದಿಳಿದರು.

ಕನ್ನಡನಾಡವರಿಗೆ ಶ್ರವಣಬೆಳ್ಗೊಳಕ್ಕಿಂತ ಪವಿತ್ರವಾದ ಜೈನಕ್ಷೇತ್ರ ವಿದೆಯೆ ? ಜೈನಧರ್ಮವನ್ನು ಇಲ್ಲಿಗೆ ತಂದ ಭದ್ರಬಾಹುಸ್ವಾಮಿಗಳು ಬಂದುದು ಇಲ್ಲಿಗೇ ಅಲ್ಲವೆ ? ಇಲ್ಲಿ ಚಿಕ್ಕ ಬೆಟ್ಟದ ಮೇಲೆ ಈ ಭದ್ರಬಾಹು ಸ್ವಾಮಿಗಳ ಗುಹೆ, ಪಾದ ಚಿಹ್ನೆ, ನಿಸಿದಿಗೆಗಳೂ ಆಗಿನಿಂದಲೂ ಪ್ರಸಿದ್ಧವೇ. ಇವನ್ನು ನೋಡಿಕೊಂಡು, ಪೂಜೆಸಲ್ಲಿಸಿ ಹೋಗೋಣವೆಂದು ಚಾವುಂಡ ರಾಯನೂ, ಅವನ ತಾಯಿಯೂ, ಪರಿವಾರದವರೂ ಚಿಕ್ಕಬೆಟ್ಟದ ಮೇಲೇ ಬಿಡಾರ ಹೂಡಿದರು.

ಆ ಕಾಲಕ್ಕೆ ಚಿಕ್ಕಬೆಟ್ಟ (ಇದನ್ನು ಚಂದ್ರಗಿರಿ ಎಂದೂ ಕರೆಯುತ್ತಾರೆ)ದ ಮೇಲೆ ಈಗಿರುವ ಯಾವ ಕಟ್ಟಡಗಳೂ ಇರಲಿಲ್ಲ ; ಭದ್ರಬಾಹುಸ್ವಾಮಿಗಳ ಗುಹೆಯೊಂದಿದ್ದಿತು, ಅಷ್ಟೆ. ಯಾತ್ರಿಕರು ಅಲ್ಲಿ ತಂಗಬೇಕಾಯಿತು. ರಾತ್ರಿ ಚಾವುಂಡರಾಯ ಮಲಗಿದ್ದಾಗ ಅವನಿಗೊಂದು ಕನಸಾಯಿತು. ಅವ ನಿಂದ ಪೂಜೆಗೊಳ್ಳುತ್ತಿದ್ದ ಪದ್ಮಾವತಿಯಕ್ಷಿಣಿ ಕಾಣಿಸಿಕೊಂಡು, "ಬಾಹು ಬಲಿಯ ಬಿಂಬವನ್ನು ನೋಡಲು ದೂರದ ಪೋದನಪುರಕ್ಕೆ ಹೋಗಬೇಕಾ ಗಿಲ್ಲ. ನಿನ್ನ ತಾಯಿ ಮುದುಕಿ; ಅಲ್ಲಿಯ ಪ್ರಯಾಣ ಸುಲಭವಲ್ಲ. ಮೇಲಾಗಿ, ಬಾಹುಬಲಿಯ ಬಿಂಬ ಇಲ್ಲಿಯೇ ಇದೆ. ನೀನು ತಂಗಿರುವ ಬೆಟ್ಟದ ಎದುರಿ ಗಿರುವ ದೊಡ್ಡಬೆಟ್ಟದ ಮೇಲೇ ಇದೆ ; ರಾಮ-ರಾವಣರಿಂದ ತುಂಬ ಹಿಂದೆಯೇ ಪ್ರತಿಷ್ಠಿತವಾದ ದೊಡ್ಡ ಶಿಲಾಮೂರ್ತಿ. ಆದರೆ ಈಗ ಅದು ಯಾರಿಗೂ ಕಾಣಿಸುತ್ತಿಲ್ಲ. ನೀನು ಬೆಳಗಾಗುತ್ತಲೇ ಎದ್ದು, ನಿತ್ಯಕರ್ಮ ಗಳನ್ನು ಮುಗಿಸಿ, ಭದ್ರಬಾಹು ಗುಹೆಯ ಬಳಿಯಿರುವ ಬಂಡೆಯ ಮೇಲೆ ನಿಂತು, ಎದುರಿನ ದೊಡ್ಡಬೆಟ್ಟಕ್ಕೆ ಭಕ್ತಿಯಿಂದ ಬಾಣ ಬಿಡು. ಬಂಡೆಯಿಂದ ಬಿಂಬ ಕಾಣಿಸಿಕೊಳ್ಳುತ್ತದೆ" ಎಂದು ಹೇಳಿದಂತಾಯಿತು.

ಚಾವುಂಡರಾಯನು ಸೋಜಿಗವೆಂದು ಬಗೆದು, ತಾಯಿಯನ್ನು ಮುಂದೆ ಮಾಡಿಕೊಂಡು ಪರಿವಾರದವರೊಡಗೂಡಿ, ಭದ್ರಬಾಹುಮುನಿಗಳ ಹೆಜ್ಜೆ ಗುರುತುಗಳನ್ನು ಭಕ್ತಿಯಿಂದ ಪೂಜೆಮಾಡಿ, ಅದರ ಬಳಿಯೇ ಇದ್ದ ಬಂಡೆಯ ಮೇಲೆ ಕಾಲೂರಿ, ದೊಡ್ಡಬೆಟ್ಟದ ಮೇಲೆ ಕಾಣಿಸುತ್ತಿದ್ದ ಎತ್ತ ರದ ಬಂಡೆಯೊಂದಕ್ಕೆ ಗುರಿಯಿಟ್ಟು ಬಾಣ ಹೊಡೆದನು. ಆ ಕಾಲಕ್ಕೆ ದೊಡ್ಡಬೆಟ್ಟ ದಟ್ಟವಾದ ಕಾಡಾಗಿದ್ದಿತು ; ಅಲ್ಲಿಗೆ ಹೋಗುವುದೂ



ಚಂದ್ರಗಿರಿ

ಕಷ್ಟವಾಗಿದ್ದಿತು. ಅದನ್ನು ಕೂಷ್ಮಾಂಡಾರಣ್ಯವೆಂದು ಕರೆಯುತ್ತಿದ್ದರು.

ಚಾವುಂಡರಾಯನ ಬಿಲ್ಲಿನಿಂದ ಹಾರಿ ಹೋದ ಬಾಣ ನೇರವಾಗಿ ಆ ಬಂಡೆಗೆ ಬಡಿಯಿತು. ಒಡನೆಯೇ, ಬಂಡೆ ಹತ್ತಾರು ಹೋಳುಗಳಾಗಿ ಒಡೆಯಿತು. ಬಂಡೆಯೊಳಗೆ ಅಡಗಿದ್ದ ದೊಡ್ಡದೊಂದು ಶಿಲಾವಿಗ್ರಹ ಎಲ್ಲರಿಗೂ ಕಾಣಿಸಿಕೊಂಡಿತು. ಇದೇ ಬಾಹುಬಲಿಯ ಮೂರ್ತಿಯೆಂದು ಎಲ್ಲರೂ ಜಯಕಾರಮಾಡಿ ನಮಸ್ಕರಿಸಿದರು; ಅನಂತರ, ದುರ್ಗಮವಾದ ಆ ಬೆಟ್ಟಕ್ಕೆ ದಾರಿ ಮಾಡಿಕೊಂಡು, ಬಾಹುಬಲಿಮೂರ್ತಿಯ ಬಳಿ ಬಂದು ಪೂಜೆ ಸಲ್ಲಿಸಿದರು.

ಇದು ಕಥೆ. ದಿಟವಾಗಿ, ಈ ಮೂರ್ತಿಯ ಬಲಭಾಗದಲ್ಲಿ ಕೆಳಗಡೆ ಬಂಡೆಯ ಮೇಲೆ 'ಶ್ರೀ ಚಾಮುಣ್ಡರಾಜ ಮಾಡಿಸಿದಂ' ಎಂದು ಹಳಗನ್ನಡ ಲಿಪಿಯಲ್ಲಿ ಬರಹವಿದೆ. ಇದೇ ಅರ್ಥದ ಬರಹ ತಮಿಳು ಭಾಷೆಯಲ್ಲಿಯೂ ಮರಾಠಿ ಭಾಷೆಯಲ್ಲಿಯೂ ಇದೆ. ಅಷ್ಟಲ್ಲದೆ, ಸುಜನೋತ್ತಂಸ ಬೊಪ್ಪಣ ಕವಿಯು ಬರೆದ ಜಿನಸ್ತುತಿಯ ವಿಚಾರ ಆಗಲೇ ಬಂದಿತಷ್ಟೇ? ಇದು ಮೂರ್ತಿಯ ಬಳಿಯೇ ಮಹಾದ್ವಾರದ (ದ್ವಾರಪಾಲಕರ ಬಾಗಿಲ) ಪಶ್ಚಿಮದಲ್ಲಿರುವ ಶಾಸನ, 1180ರಲ್ಲಿ ಸಿದ್ಧವಾದುದು ಎಂದೂ ಹೇಳಿದೆಯಷ್ಟೆ. ಅದರಲ್ಲಿ ಪೋದನಪುರದ ಬಾಹುಬಲಿಯ ದೊಡ್ಡ ಮೂರ್ತಿಯನ್ನು ನೋಡಿ ಬರಲು ಚಾವುಂಡರಾಯ ಹೊರಟನೆಂದೂ, ಆದರೆ ಪೋದನಪುರ ತುಂಬ ದೂರದಲ್ಲಿದೆಯೆಂದೂ ಈಗ ಅದು ದುರ್ಗಮವಾದ ಪ್ರದೇಶವೆಂದೂ ಅರಿತು, ಅಂಥದೇ ಮೂರ್ತಿಯನ್ನು ತಾನೇ ಮಾಡಿಸಲು ನಿಶ್ಚಯಿಸಿ ತುಂಬ ಶ್ರಮದಿಂದ ಈ ಕೆಲಸವನ್ನು ಪೂರೈಸಿದನೆಂದೂ ವಿವರವಿದೆ.

ಎಂದರೆ, ಆ ಮೂರ್ತಿಯನ್ನು ಚಾವುಂಡರಾಯನೇ ಮಾಡಿಸಿದನೆನ್ನುವುದು ಸ್ಪಷ್ಟವಾಗುತ್ತದೆ. ಇದನ್ನು ಪ್ರತಿಷ್ಠೆಮಾಡಿಸಿದ ವಿವರವಂತೂ ಒಂದು ಸಂಸ್ಕೃತ ಶ್ಲೋಕದಲ್ಲಿ ಮೂಡಿಬಂದಿದೆ–

ಕಲ್ಯಬ್ದೇ ಷಟ್ಶತಾಖ್ಯೇ ವಿನುತವಿಭವಸಂವತ್ಸರೇ ಮಾಸಿ ಚೈತ್ರೇ ।
ಪಂಚಮ್ಯಾಂ ಶುಕ್ಲಪಕ್ಷೇ ದಿನಮಣಿದಿವಸೇ ತ್ವಷ್ಟ್ರಯೋಗೇ ಸುಲಗ್ನೇ ।
ಸೌಭಾಗ್ಯೇ ಹಸ್ತನಾಮ್ನಿ ಪ್ರಕಟತಭಗಣೇ ಸುಪ್ರತಿಷ್ಠಾಂ ಚಕಾರ ।
ಶ್ರೀಮಚ್ಚಾಮುಂಡರಾಜೋ ಬೆಲುಗುಲನಗರೇ ಗೋಮಟೇಶ ಪ್ರತಿಷ್ಠಾಂ ॥

ಈ ಶ್ಲೋಕದ ಪೂರ್ವಾರ್ಧದ ಪ್ರಕಾರ ಕಲಿಯುಗದ ಆರುನೂರಕ್ಕೆ



ಸಮವಾದ ವಿಭವಸಂವತ್ಸರದ ಚೈತ್ರಮಾಸದ ಶುದ್ಧ ಪಂಚಮೀ ಭಾನುವಾರ, ಸೌಭಾಗ್ಯಯೋಗ, ಕುಂಭಲಗ್ನ ಮತ್ತು ಮೃಗಶಿರಾ ನಕ್ಷತ್ರವಿದ್ದಾಗ ಬೆಳಗೊಳದಲ್ಲಿ ಗೋಮಟೇಶ್ವರನ ಪ್ರತಿಷ್ಠೆಯಾಯಿತು. ಮೊದಲನೆಯ ಸಾಲಿನಲ್ಲಿ ಸೂಚಿತವಾಗಿರುವ ಸಂವತ್ಸರ ಕ್ರಿಸ್ತಾಬ್ದ 968ಕ್ಕೆ ಸರಿಯಾಗುತ್ತದೆ. ಆದರೆ ಕೆಲವು ಪಂಡಿತರು ಇದನ್ನು ಬೇರೆ ಬೇರೆಯಾಗಿ ನಿರ್ಧರಿಸಿದ್ದಾರೆ. ಸೊಂಡೇಕೊಪ್ಪದ ಡಾ॥ ಶ್ರೀಕಂಠಶಾಸ್ತ್ರಿಗಳ ಪ್ರಕಾರ 907–8 ; ಮಂಜೇಶ್ವರದ ಶ್ರೀ ಗೋವಿಂದ ಪೈಗಳ ಪ್ರಕಾರ 981ರ ಮಾರ್ಚ್ ತಿಂಗಳ ಹದಿಮೂರನೆಯ ದಿನ; ರುದ್ರಪಟ್ಟಣದ ಡಾ॥ ಶ್ಯಾಮಶಾಸ್ತ್ರಿಗಳ ಪ್ರಕಾರ 1028ರ ಮಾರ್ಚ್ ತಿಂಗಳ ಮೂರನೆಯ ದಿನ; ಹಯವದನರಾಯರ ಪ್ರಕಾರ 983.

ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಚಾವುಂಡರಾಯನೇ ಬರೆದ ಮಹಾಪುರಾಣ ('ಚಾವುಂಡರಾಯಪುರಾಣ' ಅಥವಾ 'ತ್ರಿಷಷ್ಟಿಲಕ್ಷಣ ಮಹಾಪುರಾಣ') ಕ್ರಿಸ್ತಾಬ್ದ 978ರಲ್ಲಿ ಸಿದ್ಧವಾಯಿತು. ಇದರಲ್ಲಿ ಚಾವುಂಡರಾಯನ ಹಿರಿಮೆಯನ್ನೂ ಹೆಗ್ಗಳಿಕೆಯನ್ನೂ ಕುರಿತು ಮಾತುಗಳು ಬೇಕಾದಷ್ಟು ಬಂದಿವೆ; ಅವನ ಸಾಹಸಗಳನ್ನೂ ಅವನು ನಿರ್ವಹಿಸಿದ ಕೆಲಸಗಳನ್ನೂ ಹೇಳಿದೆ. ಆದರೆ ಈ ಸಂದರ್ಭದಲ್ಲಿ ಅವನು ಗೊಮ್ಮಟಮೂರ್ತಿಯನ್ನು ಮಾಡಿಸಿದ ವಿವರ ಮಾತ್ರ ಬಂದಿಲ್ಲ. ಅವನು ಮಾಡಿದ, ಮಾಡಿಸಿದ ಕೆಲಸಗಳಲ್ಲಿ ಇದಕ್ಕಿಂತ ಅದ್ಭುತವಾದುದು, ಸ್ವಾರಸ್ಯವಾದುದು ಇನ್ನೊಂದಿದೆಯೆ ? ಅದನ್ನು ಅವನಾಗಲೀ ಅವನ ಪ್ರಶಸ್ತಿಯನ್ನು ಇಲ್ಲಿ ಸೇರಿಸಿದ ಇನ್ನೊಬ್ಬ ಕವಿಯಾಗಲೀ ಮರೆಯುತ್ತಿದ್ದನೆ ? ಆದುದರಿಂದ, ನಾವು ಊಹಿಸಬೇಕಾದುದು ಇದು–ಈ ಕಾವ್ಯ ಬರೆಯುವ ಕಾಲದಲ್ಲಿ ಇನ್ನೂ ಗೊಮ್ಮಟಮೂರ್ತಿಯನ್ನು ಮಾಡಿಸುವ ಬಯಕೆ ಮೂಡಿರಲಿಲ್ಲ, ಅಥವಾ ಕೆಲಸ ಮುಗಿದಿರಲಿಲ್ಲ. ಎಂದರೆ ಕ್ರಿಸಾಬ್ದ 978ರ ತರುವಾಯ ಈ ಮೂರ್ತಿ ಪ್ರತಿಷ್ಠೆಯಾಯಿತು ಎನ್ನಬಹುದು.

ಇನ್ನೊಂದು ವಿವರವನ್ನೂ ಗಮನಿಸಬೇಕು. ಚಾವುಂಡರಾಯ ಮಂತ್ರಿಯಾಗಿದ್ದುದು ಗಂಗರಾಜ ನಾಲ್ಕನೆಯ ರಾಚಮಲ್ಲನ ಕಾಲದಲ್ಲಿ ಎಂದು ಒಂದು ಶಾಸನ ತಿಳಿಸುತ್ತದೆ. ಗೊಮ್ಮಟನ ಮೂರ್ತಿಯನ್ನು ಚಾವುಂಡರಾಯ ಮಾಡಿಸಿದುದನ್ನು ಮೆಚ್ಚಿಕೊಂಡು ಈ ರಾಜನು ಅವನಿಗೆ 'ರಾಯ'ನೆಂಬ ಬಿರುದನ್ನು ಕೊಟ್ಟು ಸನ್ಮಾನಿಸಿದನಂತೆ. ಕ್ರಿಸ್ತಾಬ್ದ 977ಕ್ಕೇ ಈ ಅರಸನ

ಅಧಿಕಾರ ಮುಗಿಯಿತು. ಚಾವುಂಡರಾಯನು ಮಂತ್ರಿಯಾಗಿದ್ದ ಕಡೆಯ ರಾಜ ರಕ್ಕಸಗಂಗ; ಇವನೇ ಚಾವುಂಡರಾಯನನ್ನು ಸನ್ಮಾನಿಸಿದವನೆಂದು ಬಗೆದರೆ, ಇವನ ಆಳ್ವಿಕೆಯು 984ಕ್ಕೆ ಮುಗಿಯಿತು. ಎಂದರೆ, ಗೊಮ್ಮಟನ ಪ್ರತಿಷ್ಠೆ ಕ್ರಿಸ್ತಾಬ್ದ 984ಕ್ಕೆ ಮೊದಲೇ ಆಗಿರಬೇಕು.

ಗೊಮ್ಮಟಮೂರ್ತಿ

ಇದು ಹೇಗಾದರೂ ಇರಲಿ, ಈ ಮೂರ್ತಿಗಂತೂ ಸುಮಾರು ಸಾವಿರ ವರ್ಷಗಳು ಕಳೆದಿವೆ. ಆದರೆ ಇಂದು ನೀವು ಅದರ ಮುಂದೆ ನಿಂತು ನೋಡಿದರೆ, ಇದೇ ತಾನೆ, ನೆನ್ನೆಮೊನ್ನೆ, ಕಡೆದಷ್ಟು ಹೊಸದಾಗಿ ಕಾಣುತ್ತದೆ! ಇದನ್ನು ಕಡೆದ ಶಿಲ್ಪಿಯ ಹೆಸರು ಅರಿಟ್ಟೊನೇಮಿ (ಅರಿಷ್ಟನೇಮಿ ಎನ್ನುವುದರ ಪ್ರಾಕೃತರೂಪ) ಎಂದು ಹೇಳುತ್ತಾರೆ. ಆದರೆ ಇವನ ವಿಚಾರ ನಮಗೆ ಏನೇನೂ ತಿಳಿದುಬಂದಿಲ್ಲ. ಶ್ರವಣಬೆಳ್ಗೊಳದಲ್ಲಿಯೇ ಚಿಕ್ಕಬೆಟ್ಟದ ಮೇಲೆ ಮಹಾನವಮಿ ಮಂಟಪದ ಪಶ್ಚಿಮಕ್ಕೆ ಗೊಮ್ಮಟನ(ಎಂದರೆ ಬಾಹುಬಲಿಯ) ಅಣ್ಣನಾದ ಭರತಚಕ್ರವರ್ತಿಯ ಒಂಬತ್ತಡಿ ಎತ್ತರದ ಮೂರ್ತಿಯೊಂದಿದೆ. ಇದೂ ಗೊಮ್ಮಟನಂತೆಯೇ ದೊಡ್ಡ ಬಂಡೆಯೊಂದರಲ್ಲಿ ಕಡೆದ ಅಖಂಡ ವಿಗ್ರಹ; ಆದರೆ ಕೆಳಭಾಗದ ಕೆಲಸ ಪೂರ್ಣವಾಗದೆ ನಿಂತಿದೆ. ಇದನ್ನೂ ಅರಿಟ್ಟೊನೇಮಿಯೇ ಕಡೆದನೆಂದು ಹೇಳುವುದಿದೆ.

ಮೂರ್ತಿಯ ಎತ್ತರದ ಪ್ರಸ್ತಾಪ ಆಗಲೇ, ಮೊದಲಲ್ಲೇ, ಬಂದಿದೆ. ಉತ್ತರದಿಕ್ಕಿಗೆ ಮುಖಮಾಡಿ, ನೆಟ್ಟಗೆ ನಿಂತ ಈ ಮೂರ್ತಿಯು ದಿಗಂಬರ ಜಿನರು ಇರುವಂತೆ ಬೆತ್ತಲೆಯಾಗಿದೆ. ಮುಖಮುದ್ರೆ ಗಂಭೀರವಾಗಿ, ಪ್ರಸನ್ನವಾಗಿ, ಶಾಂತವಾಗಿದೆ; ಸೌಂದರ್ಯವೂ ಎದ್ದು ಕಾಣುತ್ತದೆ; ನಸುನಗುವೂ ಮೂಡಿದೆ. ಮುಖದ ಪ್ರಮಾಣ ಎಷ್ಟು ಊಹಿಸಬಲ್ಲಿರಾ? ಆರಡಿ ಆರಂಗುಲ ಉದ್ದ! ಮನುಷ್ಯನ ಎತ್ತರಕ್ಕಿಂತಲೂ ಹೆಚ್ಚಿನದು! ಅಷ್ಟಾದರೂ ಮುಖಮುದ್ರೆಯ ಮುಗ್ಧಭಾವ ಆಶ್ಚರ್ಯವೆನಿಸುತ್ತದೆ. ತಲೆಯ ಮೇಲೆ ಗುಂಗುರು ಕೂದಲನ್ನು ಶಿಲ್ಪಿ ತುಂಬ ಸೊಗಸಾಗಿ, ಸ್ವಾರಸ್ಯವಾಗಿ ಬಿಡಿಸಿದ್ದಾನೆ. ದೃಷ್ಟಿಯನ್ನು ಧ್ಯಾನದಲ್ಲಿ ನಿಲ್ಲಿಸಿದ್ದಾನೆ.

ಸಾಂಪ್ರದಾಯಿಕವಾದ ಶಿಲ್ಪ ಶೈಲಿಯನ್ನೇ ಬಳಸಿರುವುದರಿಂದ ನಡು ಸಣ್ಣದಾಗಿದೆ. ತೊಡೆಗಳ ಮೇಲ್ಭಾಗದಿಂದ ಮೇಲೆ ಮೂರ್ತಿ ಸ್ವತಂತ್ರವಾಗಿ ಎದ್ದು ನಿಲ್ಲುತ್ತದೆ; ಸುತ್ತಲೂ ಸೊಗಸಾಗಿ ರೂಪವನ್ನು ಶಿಲ್ಪಿ ಬಿಡಿಸಿದ್ದಾನೆ. ಕೆಳಭಾಗ ಮಾತ್ರ ಬಂಡೆಗೆ ಸೇರಿಕೊಂಡೇ ಇದೆ. ಇಷ್ಟು ಎತ್ತರದ ಮೂರ್ತಿಗೆ ಸುಭದ್ರವಾದ ಆಸರೆ ಬೇಡವೆ? ಆದರೆ ಶಿಲ್ಪಿ ಈ ಬಂಡೆಯ ಆಸರೆಯನ್ನು ಹಾವಿನ ಹುತ್ತಗಳಂತೆ ಜಾಣತನದಿಂದ ಕಡೆದಿದ್ದಾನೆ. ಕಾಲುಗಳ ಸುತ್ತ ಇರುವ ಈ ಹುತ್ತಗಳಿಂದ ಹಾವುಗಳು ಹೊರಗೆ ಹರಿದುಬರುತ್ತಿವೆ. ಎಷ್ಟಾದರೂ ಕುಕ್ಕುಟೇಶ್ವರನಲ್ಲವೆ ಇವನು?

ಮೂರ್ತಿಯ ಎರಡೂ ಕಾಲುಗಳ ಮೇಲೆ ಹಬ್ಬಿ, ತೋಳುಗಳಿಗೂ ಹರಡಿರುವ ಮಾಧವೀಲತೆಯೆನ್ನುವ ಬಳ್ಳಿಯನ್ನು ಕಡೆದಿರುವುದು ಚೆನ್ನಾಗಿ ಒಪ್ಪುತ್ತದೆ. ಕನ್ನಡದಲ್ಲಿ ಈ ಬಳ್ಳಿಯನ್ನು ಕಾಡುಗುಲಗಂಜಿಯೆನ್ನುತ್ತಾರೆ. ಬೇಸಿಗೆಯಲ್ಲಿ ಬಿಳಿ ಹೂಗಳು ಬಿಟ್ಟು ತುಂಬ ಒಳ್ಳೆಯ ವಾಸನೆಯಿರುತ್ತದೆ. ದೊಡ್ಡದಾಗಿ, ಕಾಡಾಗಿ ಬೆಳೆಯುವ ಬಳ್ಳಿಯಿದು. ಇದರ ವಿನ್ಯಾಸ ಸೊಗಸಾಗಿದೆ. ಕಾಲುಗಳು ಕೊಂಚ ಗಿಡ್ಡೆಂದು ತೋರುತ್ತದೆ. ಪಾದಪೀಠದಲ್ಲಿ ಅರಳಿದ ಕಮಲದ ವಿನ್ಯಾಸವಿದೆ.

ನೆಟ್ಟಗೆ ನಿಂತಿರುವ ಈ ಮೂರ್ತಿಯ ಭುಜಪ್ರದೇಶ ವಿಶಾಲವಾಗಿದೆ; ತೋಳುಗಳು ನೆಟ್ಟಗೆ, ನೀಳಾಗಿ ಇಳಿಬಿದ್ದಿವೆ. ಯಾವ ಆಭರಣವಾಗಲೀ ಇಲ್ಲದಿರುವುದು, ಕಿವಿಗಳು ಪ್ರಲಂಬವಾಗಿ ಜೋಲಾಡುತ್ತಿರುವುದು ಮೂರ್ತಿಯ ಆಕರ್ಷಣೆಯನ್ನು ಹೆಚ್ಚಿಸುತ್ತವೆ. ಏನೊಂದೂ, ಎಷ್ಟೂ ನ್ಯೂನತೆಯಿಲ್ಲದೆ, ಅಚ್ಚುಕಟ್ಟಾಗಿ, ಕರಾರುಹಾಕ್ಕಾಗಿ ಮಾಡಿ ಮುಗಿಸಿರುವ ಕಲಾಕೃತಿ ಇದು. ಬೇಕೆಂದು ತಪ್ಪು ಹುಡುಕಲು ಹೆಣಗಾಡಿದರೂ ಒಂದಾಗಲೀ, ಸಣ್ಣದಾಗಲೀ ತಪ್ಪನ್ನು ಕಾಣುವುದು ಸಾಧ್ಯವಿಲ್ಲ. ಹೀಗೆಂದೇ ಪಂಡಿತರೂ ರಸಿಕರೂ ಇದನ್ನು 'ಪರಿಪೂರ್ಣಸುಂದರ' ಎಂದು ವರ್ಣಿಸಿದ್ದಾರೆ.

ಇದು ಬಾಹುಬಲಿಯ ಮೂರ್ತಿಯಲ್ಲವೆ? ಗೊಮ್ಮಟ ಎಂದೇಕೆ ಕರೆಯುತ್ತಾರೆ? ಪಂಡಿತರು ಬೇರೆ ಬೇರೆ ಬಗೆಯಾಗಿ ವಿವರಿಸುತ್ತಾರೆ; ದಿಟವಾದುದು ಏನೋ ತಿಳಿಯದು. ಇದು ದಕ್ಷಿಣ ದೇಶದಲ್ಲಿ, ಅದೂ ಕನ್ನಡ ನಾಡಿನಲ್ಲಿ, ವಾಡಿಕೆಯಲ್ಲಿರುವ ಹೆಸರು. ಬಾಹುಬಲಿಯ ಪೋದನಪುರದ ಮೂರ್ತಿಯಿದ್ದುದು ಕೂಷ್ಮಾಂಡಾರಣ್ಯದಲ್ಲಿ; ಶ್ರವಣಬೆಳ್ಗೊಳದ ದೊಡ್ಡಬೆಟ್ಟಕ್ಕೂ ಮೊದಲು ಅದೇ ಹೆಸರಿದ್ದಿತಂತೆ. ಕೂಷ್ಮಾಂಡ (ಎಂದರೆ ಕುಂಬಳ

ಕಾಯಿ) ಸಂಸ್ಕೃತದ ಮಾತಾದರೆ ಪ್ರಾಕೃತದಲ್ಲಿ ಅದು 'ಗುಮ್ಮಡ' ಎಂದಾಗುತ್ತದೆ, ಅದೇ ಗುಮ್ಮಟವಾಗಿ ಗೊಮ್ಮಟವಾಯಿತು ಎಂದು ವಾದ. ಚಾವುಂಡರಾಯನಿಗೇ 'ಗೊಮ್ಮಟ'ನೆಂದು ಹೆಸರಿದ್ದಿತೆಂದು ಇನ್ನೊಂದು ವಾದ; ಅವನು ನೇಮಿಚಂದ್ರನಿಂದ ಬರೆಯಿಸಿದ ಗ್ರಂಥಕ್ಕೆ 'ಗೊಮ್ಮಟಸಾರ'ವೆಂದೇ ಹೆಸರು. ಅವನು ಮಾಡಿಸಿದ ಮೂರ್ತಿಯಾದುದರಿಂದ ಗೊಮ್ಮಟೇಶ್ವರ. ಬೊಪ್ಪಣ ಕವಿಯ ಕಾವ್ಯದ ಹೆಸರು 'ಗೊಮ್ಮಟಸ್ತುತಿ'ಯೇ. ಈ ಕಾವ್ಯದಲ್ಲಿ ಅವನು 'ಶ್ರೀಗೊಮ್ಮಟ ಜಿನ', 'ಗೊಮ್ಮಟೇಶ್ವರ ಜಿನ', 'ಗೊಮ್ಮಟ ಜಿನಾಧೀಶ', "ಗೊಮ್ಮಟನಾಥ', 'ಗೊಮ್ಮಟದೇವ' ಎಂದೇ 'ಬಾಹುಬಲೀಶ'ನನ್ನು ಕರೆದಿದ್ದಾನೆ. ಹೀಗಾಗಿ ಈ ಮೂರ್ತಿ ಗೊಮ್ಮಟೇಶ್ವರ (ಅಥವಾ ಗೋಮಟೇಶ್ವರ) ಎಂದು ಪ್ರಸಿದ್ಧವಾಯಿತು.

ಗುಳ್ಳಕಾಯಜ್ಜಿಯ ಭಕ್ತಿ

ಹೀಗೆ ಚಾವುಂಡರಾಯನು ಗೊಮ್ಮಟಮೂರ್ತಿಯನ್ನು ಕಡೆಯಿಸಿ ನಿಲ್ಲಿಸಿದ ಮೇಲೆ, ಪ್ರತಿಷ್ಠೆ ಮಾಡುವಾಗ ಅಭಿಷೇಕದ ಸಂದರ್ಭ ಒದಗಿತು. ಇಷ್ಟು ಎತ್ತರದ ಮೂರ್ತಿಗೆ ಅಭಿಷೇಕಮಾಡುವುದೇನು ಸುಲಭವಾದ ಮಾತೇ ? ಆದರೆ ಚಾವುಂಡರಾಯನಿಗೇನು ಅದು ದೊಡ್ಡ ಮಾತಾಗಿರಲಿಲ್ಲ. 'ಕ್ಷಿತಸಂಪೂಜ್ಯ'ವೆನಿಸಿದ ಈ 'ಸುಮನೋಹರಭಯಂಕರ' ಮೂರ್ತಿಯನ್ನು 'ಅತಿತುಂಗಾಕೃತಿ'ಯಲ್ಲಿ ಮಾಡಿಸಿದ ಸಾಹಸಿಯಲ್ಲವೆ ಅವನು ? ಮೂರ್ತಿಗೆ ಪಂಚಾಮೃತ ಅಭಿಷೇಕ ಮಾಡಿಸಬೇಕೆಂದು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡು ಪ್ರತಿಷ್ಠೆಯ ವೈಭವವನ್ನು ಕಂಡು, ಸ್ವಲ್ಪ ಮೈಮರೆತು, ಹೆಮ್ಮೆಯಿಂದ ಉಬ್ಬಿದ. ಯಾರೂ ಎಲ್ಲಿಯೂ ಇಲ್ಲಿನವರೆಗೆ ಮಾಡದಿದ್ದ ಅದ್ಭುತವಾದೊಂದು ಕೆಲಸವನ್ನು ತಾನು ನಿರ್ವಹಿಸಿದ್ದೇನೆಂದು ಅವನ ಹೆಮ್ಮೆ. ಸಹಜವಾದುದೇ ಅಲ್ಲವೆ ? ಯಾರಿಗಾದರೂ ಅದು ಹೆಮ್ಮೆಯನ್ನು ತರಿಸುವಂಥದೇ ! ಲೋಕದಲ್ಲಿಯೇ ಅಂಥ ಸಾಹಸವನ್ನು ಮಾಡಿದವರು ಇನ್ನು ಯಾರಿದ್ದಾರೆ ?

ಆದರೆ ಹೆಮ್ಮೆ ಭಕ್ತಿಗೆ ಸರಿಯಾಗದು; ಹೊಂದಿಕೊಳ್ಳುವುದಿಲ್ಲ. ಹೆಮ್ಮೆ ಹೆಚ್ಚಾದರೆ ಭಕ್ತಿ ಕಡಮೆಯಾಗುತ್ತದೆ. ಚಾವುಂಡರಾಯನ ಮೈಯುಬ್ಬಿ

ಮನ ಹಿಗ್ಗಿ 'ತನ್ನ ಸಾಹಸ' ಎಂಬುದೇ ಮುಂದಾಗಿರಲು ಮೂರ್ತಿಯ ಪಂಚಾಮೃತ ಕಲಶಗಳನ್ನು ಮೇಲೆ ಕೊಂಡೊಯ್ದು ಮೂರ್ತಿಯ ತಲೆಯ ಮೇಲೆ ಸುರಿದರು. ನೆರೆದಿದ್ದ ಸಾವಿರಾರು ಜನ ಒಕ್ಕೊರಲಿನಿಂದ ಜಯಕಾರ ಮಾಡಿದರು. ಇದನ್ನು ನೋಡಿ, ಕೇಳಿ, ಚಾವುಂಡರಾಯ ಇನ್ನಷ್ಟು ಉಬ್ಬಿದ; ತನಗೆಣೆಯಾರು ಈ ಲೋಕದಲ್ಲಿ ? ಎಂದುಕೊಂಡ. ಕೊಡಗಳ ಹಾಲು ತಲೆಯ ಮೇಲಿಂದ ಮುಖಕ್ಕೆ ಹರಿದು, ಭುಜಗಳ ಮೇಲೆ ಬಿದ್ದು ತೋಳು ಗಳಲ್ಲಿಯೂ ನಡುವಿನಲ್ಲಿಯೂ ಬಂದಿತು. ಆದರೆ ತೊಡೆಗಳನ್ನು ದಾಟಿ ಕಾಲುಗಳವರೆಗೆ ಬರಲೇ ಇಲ್ಲ!

ಚಾವುಂಡರಾಯನ ಕೈಯಿಂದ ಇನ್ನೊಂದು ದೊಡ್ಡ ಕೊಡ ಹಾಲು ಮೇಲಕ್ಕೆ ಹೋಯಿತು; ಮೂರ್ತಿಯ ತಲೆಯ ಮೇಲೆ ಸುರಿದು ಮೈಯಿಂದ ಕೆಳಕ್ಕಿಳಿಯಿತು. ಕಾಲುಗಳನ್ನಂತೂ ಮುಟ್ಟಲಿಲ್ಲ! ನೆರೆದಿದ್ದವರಿಗೆಲ್ಲ ಆಶ್ಚರ್ಯ ವಾಯಿತು. ಏನಿದು ಸೋಜಿಗ ? ಹತ್ತು, ನೂರು ಕೊಡಗಳಷ್ಟು ಹಾಲನ್ನು ಅಭಿಷೇಕಮಾಡಿದರೂ ಗೊಮ್ಮಟನ ಪಾದಗಳನ್ನು ಮಾತ್ರ ತೊಳೆಯಲಿಲ್ಲ ವಲ್ಲ! ಪಾದಗಳಿಗೆ ಅಭಿಷೇಕವಾಗದೆ ಅಭಿಷೇಕ ಪೂರ್ಣವಾಗದು; ಪ್ರತಿಷ್ಠೆಯ ಕೆಲಸ ಮುಂದರಿಯುವಹಾಗಿಲ್ಲ.

ಪುರೋಹಿತರಿಗೂ ಪರಿಜನರಿಗೂ ಚಿಂತೆಗೆ ಕಾರಣವಾಯಿತು. ಪ್ರತಿ ಷ್ಠೆಯ ಮುಹೂರ್ತ ಹತ್ತಿರ ಬರುತ್ತಿದೆ; ಲಗ್ನ ದಾಟಬಾರದು. ಆದರೆ ಅಭಿಷೇಕದ ವಿಧಿಯೇ ಮುಗಿಯುವಂತಿಲ್ಲ! ಎಷ್ಟೆಷ್ಟು ಹೆಣಗಾಡಿದರೂ, ಎಷ್ಟು ಹಾಲನ್ನು ಸುರಿದರೂ ಪಾದಸ್ಪರ್ಶವಾಗದು. ಹೆಮ್ಮೆಯಿಂದ ಮೈಯುಬ್ಬಿ ನಿಂತಿದ್ದ ಚಾವುಂಡರಾಯನಿಗೂ ಏನು ಮಾಡುವುದೆಂದು ತೋಚದಾಯಿತು. ಅಷ್ಟರಲ್ಲಿ, ನೆರೆದಿದ್ದ ಸಾವಿರಾರು ಜನರ ನಡುವೆ ನಿಂತಿದ್ದ ಮುದುಕಿಯೊಬ್ಬಳು ಮುಂದೆ ಬಂದಳು. ತನ್ನ ಕೈಯಲ್ಲಿ ಗುಳ್ಳದ ಕಾಯೊಂದನ್ನು ಹಿಡಿದು ಅದರಲ್ಲಿ ಹಾಲನ್ನು ತುಂಬಿಕೊಂಡು ಬಂದಿದ್ದಳು. 'ಇದನ್ನು ಗೊಮ್ಮಟಜಿನನಿಗೆ ಅಭಿಷೇಕ ಮಾಡಿ ನೋಡಿ' ಎಂದಳು.

ನೆರೆದಿದ್ದವರೆಲ್ಲ ನಕ್ಕರು. ಚಾವುಂಡರಾಯನಿಗೂ ಮುದುಕಿಯ ಮಾತನ್ನು ಕೇಳಿ ನಗು ಬಂದಿತು. "ಈಗಾಗಲೇ ನೂರಾರು ಕೊಡ ಹಾಲನ್ನು ನನ್ನ ಕೈಯಿಂದಲೇ ಕೊಟ್ಟಿದ್ದೇನೆ; ಮೂರ್ತಿಯ ತಲೆಯ ಮೇಲೆ ಸುರಿ ದಾಗಿದೆ, ಪಾದಸ್ಪರ್ಶವಾಗಿಲ್ಲ! ನಿನ್ನ ಸಣ್ಣ ಗುಳ್ಳದಕಾಯಿ ತುಂಬ ಹಾಲು ಏನು ಮಾಡುವುದಕ್ಕೆ ? ಸ್ವಾಮಿಯ ಒಂದು ಕಿರಿಬೆರಳೂ ಅದರಿಂದ ಒದ್ದೆ

ಯಾಗುವುದಿಲ್ಲ! ನನ್ನ ಗೊಮ್ಮಟನನ್ನು ಗುಲಗಂಜಿಪ್ರಮಾಣದವನು ಎಂದುಕೊಂಡೆಯಾ ? ಹುಚ್ಚುಮುದುಕಿ !" ಎಂದ ಚಾವುಂಡರಾಯ. ಪರಿಜನರು ಮುದುಕಿಯನ್ನು ಪಕ್ಕಕ್ಕೆ ಎಳೆದು "ದೂರ ಸರಿ, ಅಜ್ಜಿ, ಹಿಂದೆ ನಿಲ್ಲು!" ಎಂದು ಓಡಿಸಲು ತೊಡಗಿದರು.

ಆದರೆ ಮುದುಕಿ ತನ್ನ ಪಟ್ಟು ಬಿಡಲಿಲ್ಲ. "ಏನಾದರೂ ಆಗಲಿ, ನನ್ನ ಈ ಗುಳ್ಳದಕಾಯಿ ತುಂಬ ಹಾಲನ್ನು ದಯಮಾಡಿ ಕೊಳ್ಳಿ, ದೇವರ ಮೇಲೆ ಚೆಲ್ಲಿ; ನನಗಿಷ್ಟು ಸದ್ಗತಿ ಬರಲಿ!" ಎಂದು ಅಂಗಲಾಚಿ ಬೇಡಿಕೊಂಡಳು. ಅವಳು ಬೇಡಿಕೊಳ್ಳುವುದನ್ನು ಕಂಡು, ಮರುಗಿ, ಚಾವುಂಡರಾಯನು ಪುರೋಹಿತರಿಗೆ, "ಆಗಲಿ, ಅದನ್ನು ತೆಗೆದುಕೊಳ್ಳಿ; ಹೋಗುವುದೇನು? ಅದನ್ನೂ ಮೂರ್ತಿಯ ತಲೆಯ ಮೇಲೆ ಹಾಕಿಬಿಡಿ. ಅಜ್ಜಿಯ ಚಪಲ ತೀರಲಿ!" ಎಂದು ಹೇಳಿದ. ಪುರೋಹಿತರು ಮುದುಕಿಯ ಕೈಯಿಂದ ಅವಳು ಗುಳ್ಳದಕಾಯಲ್ಲಿ ತಂದಿದ್ದ ಹಾಲನ್ನು ತೆಗೆದುಕೊಂಡು, ಮೇಲಕ್ಕೊಯ್ದು ಮೂರ್ತಿಯ ತಲೆಯ ಮೇಲೆ ಸುರಿದರು.

ಏನಾಶ್ಚರ್ಯ! ಗುಳ್ಳದಕಾಯಿಯನ್ನು ನೀವು ನೋಡಿದ್ದೀರಲ್ಲ? ಎಷ್ಟು ಸಣ್ಣದು ಅದು! ಅದರಲ್ಲಿ ಹಾಲು ಎಷ್ಟು ತುಂಬೀತು? ಆದರೆ ಪುರೋಹಿತರು ಅಷ್ಟು ಹಾಲನ್ನು ಮೂರ್ತಿಯ ತಲೆಯ ಮೇಲೆ ಸುರಿದೊಡನೆ ಅದು ಧಾರೆಧಾರೆಯಾಗಿ ಹರಿದು, ಮೈಯಿಂದ ಇಳಿದು, ತೊಡೆಗಳನ್ನು ದಾಟಿ, ಕಾಲುಗಳಲ್ಲಿ ಜಾರಿ, ಪಾದಗಳೆರಡನ್ನೂ ತೋಯಿಸಿತು! ನೂರಾರು ಕೊಡ ಹಾಲು ಮಾಡದಿದ್ದುದನ್ನು ಗುಳ್ಳದಕಾಯಿ ತುಂಬ ಹಾಲು ಮಾಡಿಬಿಟ್ಟಿತು! ಅಭಿಷೇಕವಿಧಿ ಪೂರೈಸಿದಂತಾಯಿತು.

ಭಕ್ತಿಯಿಂದ ಕೈಮುಗಿದು, ಕಣ್ಣುಮುಚ್ಚಿ, ಮೈಮರೆತು ನಿಂತಿದ್ದ ಮುದುಕಿಯನ್ನು ಚಾವುಂಡರಾಯ ನೋಡಿದ. ಅವನ ಹೆಮ್ಮೆ ಕರಗಿ ನೀರಾಯಿತು. ಜಿನೇಶ್ವರನು ಒಪ್ಪಿಕೊಂಡುದು ಈ ಬಡಮುದುಕಿಯ ವಿನಮ್ರ ಭಕ್ತಿಯನ್ನು; ತನ್ನ ಸಂಪತ್ತನ್ನಲ್ಲ, ವೈಭವವನ್ನಲ್ಲ, ಸಾಹಸವನ್ನಲ್ಲ! ತಾನು ಹೆಮ್ಮೆ ಪಟ್ಟುಕೊಂಡುದೇ ಜಿನೇಶ್ವರನಿಗೆ ಹಿಡಿಸದಾಯಿತು; ತಾನು ಗರ್ವದಿಂದ ಕೊಟ್ಟ ಹಾಲನ್ನು ಜಿನೇಶ್ವರ ತನ್ನ ಪಾದಗಳ ಬಳಿ ತಂದುಕೊಳ್ಳಲಿಲ್ಲ.

ಚಾವುಂಡರಾಯ ಪಾಠ ಕಲಿತ. ಆ ಮುದುಕಿಯನ್ನು ಕರೆಯಿಸಿ, ಎಲ್ಲರೆದುರೂ ಗೌರವಿಸಿದ; ಅವಳ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದ;

ಗುಳ್ಳಕಾಯಜ್ಜಿಯ ಶಿಲಾವಿಗ್ರಹ

ಮೂರ್ತಿಯ ಪ್ರತಿಷ್ಠೆಗೆ ದಾರಿಯನ್ನು ತೋರಿಸಿದಳೆಂದು ಕೃತಜ್ಞತೆಯನ್ನು ತೋರಿಸಿದ. ಅಷ್ಟರಿಂದ ಅವನಿಗೆ ಸಮಾಧಾನವಾಗಲಿಲ್ಲ. ಈ ಗುಳ್ಳಕಾಯಜ್ಜಿಯ ಶಿಲಾವಿಗ್ರಹವನ್ನೂ ಶಿಲ್ಪಿಗಳಿಂದ ಕಡೆಯಿಸಿ ಅದನ್ನು ಗೊಮ್ಮಟಮೂರ್ತಿಯೆದುರೇ ಇರಿಸಿದ. ಗೊಮ್ಮಟಮೂರ್ತಿಯಿರುವ ಆವರಣದ ಹೊರಗೆ ಮೂರ್ತಿಯ ಕಡೆ ಮುಖ ಮಾಡಿ ನಿಂತ ಐದಡಿ ಎತ್ತರದ ಈ ಅಜ್ಜಿಯ ವಿಗ್ರಹ ಎರಡೂಕೈಗಳಲ್ಲಿ ಒಂದು ಗುಳ್ಳಕಾಯನ್ನು ಹಿಡಿದು ಸೊಗಸಾದ ಭಂಗಿಯಲ್ಲಿ ನಿಂತಿದೆ. ಈ ಗುಳ್ಳಕಾಯಜ್ಜಿಯ ಹಿಂದೆಯೇ ಬ್ರಹ್ಮದೇವರ ಕಂಬವಿದೆ; ಅದರ ಮೇಲ್ಭಾಗದ ಮಂಟಪದಲ್ಲಿ ಬ್ರಹ್ಮದೇವರ ಬಿಂಬವಿದೆ; ನೋಡಿದಿರಾ, ಅಜ್ಜಿಗೆ ಯಾವ ಸ್ಥಾನ ದೊರೆಯಿತು!

ಬೆಟ್ಟದ ನೆತ್ತಿಯ ಮೇಲೆ ಎತ್ತರವಾಗಿ ನಿಂತಿರುವ ಗೊಮ್ಮಟನ ಬಳಿ ಹೋಗಲು ಇರುವ ಬಾಗಿಲುಗಳಲ್ಲಿ 'ಗುಳ್ಳಕಾಯಜ್ಜಿ ಬಾಗಿಲು' ಎಂಬುದೂ ಒಂದು ಇದೆ. ಇದರ ಬಲಪಾರ್ಶ್ವದಲ್ಲಿ ಒಂದಡಿ ಎತ್ತರದ ಹೆಣ್ಣು ವಿಗ್ರಹವೊಂದನ್ನು ಅಂಜಲಿಬದ್ಧ ಮುದ್ರೆಯಲ್ಲಿ ಬಂಡೆಯ ಮೇಲೆ ಕಡೆದಿದ್ದಾರೆ. ಗುಳ್ಳಕಾಯಜ್ಜಿ ತೀರಿಕೊಂಡಾಗ ಅವಳ ನೆನಪಿಗೆಂದು ಇದನ್ನು ಕಡೆಯಿಸಿದರೆಂದು ತಿಳಿದು ಬರುತ್ತದೆ. ಅಂತೂ ಗೊಮ್ಮಟೇಶ್ವರನ ಪ್ರಖ್ಯಾತಿಯೊಂದಿಗೆ ಗುಳ್ಳಕಾಯಜ್ಜಿಯ ಹೆಸರೂ ಸೇರಿಕೊಂಡು ಬಂದಿತು! ಅವಳ ಕಥೆ ಪಂಚಬಾಣನೆಂಬ ಕವಿಯ 'ಭುಜಬಲಿ ಚರಿತೆ'ಯಲ್ಲಿ ಬರುತ್ತದೆ. ಇದು 1614ರ ಸುಮಾರಿಗೆ ಸಿದ್ಧವಾದ ಗ್ರಂಥ.

ತ್ಯಾಗದ ಬ್ರಹ್ಮದೇವರ ಕಂಬದಲ್ಲಿಯೇ ಚಾವುಂಡರಾಯನ ಮತ್ತು ಅವನ ಗುರು ನೇಮಿಚಂದ್ರ ಭಟ್ಟಾರಕನ ಮೂರ್ತಿಗಳನ್ನೂ ಕಡೆದಿದ್ದಾರೆ; ಈ ಕಂಬದಲ್ಲಿ ಚಾವುಂಡರಾಯನ ಶಾಸನವೂ ಇದೆ. ಆದರೆ ಕಂಬದ ನಾಲ್ಕೂ ಕಡೆಗಳಲ್ಲಿ ಬರೆಯಿಸಿದ್ದ ಈ ಶಾಸನ ಈಗ ಉತ್ತರದ ಕಡೆ ಮಾತ್ರ ಉಳಿದಿದೆ; ಪೇರ್ಗಡೆ ಕಣ್ಣನೆಂಬುವನು ಕ್ರಿ. 1200ರ ಸುಮಾರಿಗೆ ತನ್ನದೊಂದು ಸಣ್ಣ ಬರಹವನ್ನು ಮೂಡಿಸಲು, ಉಳಿದ ಮೂರೂ ಕಡೆಯಿದ್ದ ಚಾವುಂಡರಾಯನ ಶಾಸನವನ್ನು ಕೆಡಿಸಿಬಿಟ್ಟಿದ್ದಾನೆ! ಈ ಕಂಬಕ್ಕೆ ಯಕ್ಷನೊಬ್ಬನ ಸಣ್ಣ ಮೂರ್ತಿಯನ್ನು ಮಾಡಿಸಿದುದೇ ಈ ಪೇರ್ಗಡೆಯ ಹೆಗ್ಗಳಿಕೆ! ಅದಕ್ಕೊಂದು ಶಾಸನ! ಅದಕ್ಕೆ ಚಾವುಂಡರಾಯನ ಶಾಸನ ಬಲಿ!

ಮಸ್ತಕಾಭಿಷೇಕ

'ಮಸ್ತಕಾಭಿಷೇಕ'ವೆನ್ನುವ ಸಂಸ್ಕೃತ ಮಾತಿಗೆ 'ತಲೆಯ ಮೇಲೆ ಮಾಡಿಸುವ ಸ್ನಾನ' ಎಂದರ್ಥ. ಪೂಜೆಯಲ್ಲಿರುವ ವಿಗ್ರಹಗಳಿಗೆ ಅಭಿಷೇಕ ಮಾಡುತ್ತಾರಷ್ಟೆ; ಪೂಜಾವಿಧಿಗಳಲ್ಲಿ ಅದೂ ಒಂದು. ಎಲ್ಲ ದೇವಾಲಯಗಳಲ್ಲಿಯೂ ನಡೆಯುತ್ತದೆ ಇದು. ಆದರೆ ಎಲ್ಲ ವಿಗ್ರಹಗಳಂತಲ್ಲ ಗೊಮ್ಮಟ ವಿಗ್ರಹ. ಸುಮಾರು ಅರವತ್ತು ಅಡಿಗಳಷ್ಟು ಎತ್ತರದ ಈ ಮೂರ್ತಿಗೆ ಅಭಿಷೇಕ ಮಾಡುವುದು ಕಷ್ಟವೇ. ಅದರ ತಲೆಯ ಮೇಲೆ ಅಭಿಷೇಕಮಾಡಲು ದೊಡ್ಡದಾದ ಅಟ್ಟಣಿಗೆಯನ್ನೇ ಕಟ್ಟಿಕೊಳ್ಳಬೇಕು ; ಇಲ್ಲವಾದರೆ ಅಷ್ಟು ಮೇಲೆ ಹೋಗುವುದು ಹೇಗೆ ? ಹೀಗೆ ವಿಗ್ರಹದ ಹಿಂದೆ ಅಟ್ಟಣಿಗೆ ಎಂದೂ ಇರುವುದಾದರೆ ಅದರ ಸೌಂದರ್ಯಕ್ಕೆ ಕುಂದು. ಬಿಡಿಬೀಸಾಗಿ, ಯಾವ ಅಡ್ಡಿಯೂ ಇರದೆ ನಿಂತಾಗಲೇ ಅದು 'ಸುಮನೋಹರ ಭಯಂಕರ'. ಅಷ್ಟು ಮಾತ್ರವಲ್ಲದೆ, ಇಷ್ಟು ದೊಡ್ಡ ಮೂರ್ತಿಗೆ ಅಭಿಷೇಕ ಮಾಡಲು ಬೇಕಾಗುವ ಪಂಚಾಮೃತದ ಸಾಮಗ್ರಿಗಳನ್ನೂ ಶುದ್ಧೋದಕವನ್ನೂ ಒದಗಿಸುವವರು ಯಾರು ?

ಈ ಎಲ್ಲ ತೊಡಕುಗಳಿಂದಾಗಿ ಗೊಮ್ಮಟೇಶ್ವರನಿಗೆ ತಲೆಯ ಮೇಲಿನ ಸ್ನಾನ ದಿನವೂ ನಡೆಯುವುದಿಲ್ಲ, ವರ್ಷಕ್ಕೊಮ್ಮೆಯೂ ನಡೆಯುವುದಿಲ್ಲ! ನಿತ್ಯಕ್ರಿಯೆಯಾಗಿ ನಡೆಯುವುದು ಪಾದಸ್ನಾನವಷ್ಟೆ; ಪಾದ ಪೀಠದ ಮುಂದೆ ಗೊಮ್ಮಟನ ಸಣ್ಣ ಲೋಹಮೂರ್ತಿಯೊಂದನ್ನು ಇರಿಸಿಕೊಂಡು ಅದಕ್ಕೆ ಅಭಿಷೇಕಾದಿಗಳನ್ನು ನಡೆಸುತ್ತಾರೆ.

ಆದರೆ ಕೆಲವೊಂದು ಲಗ್ನಗಳಲ್ಲಿ ಮಸ್ತಕಾಭಿಷೇಕ ನಡೆಯಬೇಕೆಂಬ ಕಟ್ಟಳೆಯಿದೆ. ಮೂರ್ತಿಯನ್ನು ಪ್ರತಿಷ್ಠೆ ಮಾಡಿದ ಸಂದರ್ಭದಲ್ಲಿ ಚಾವುಂಡರಾಯನೇ ಇದನ್ನು ಮಾಡಿಸಿದ. ಅಲ್ಲಿಂದ ಮುಂದೆ ಮಸ್ತಕಾಭಿಷೇಕ ನಡೆದ ಉಲ್ಲೇಖ ಇರುವುದು ಕ್ರಿ. 1398ರ ಶಾಸನವೊಂದರಲ್ಲಿ ಪಂಡಿತಾರ್ಯನೆಂಬುವನು ಏಳು ಬಾರಿ ಗೊಮ್ಮಟೇಶ್ವರನಿಗೆ ಮಸ್ತಕಾಭಿಷೇಕ ಮಾಡಿಸಿದುದು

ಇದರಿಂದ ತಿಳಿದುಬರುತ್ತದೆ. ಅದಕ್ಕೆ ಮೊದಲು ಯಾರು ಮಾಡಿಸಿದ್ದರೋ, ಯಾವಾಗ ಮಾಡಿಸಿದ್ದರೋ ತಿಳಿಯದು. ಪಂಡಿತಾರ್ಯನದೇ ನಮಗೆ ದೊರೆತಿರುವ ಉಲ್ಲೇಖಗಳಲ್ಲಿ ಮೊದಲನೆಯದು, ತುಂಬ ಹಳೆಯದು. 1500ರ ಸುಮಾರಿಗೆ ಸಿದ್ಧವಾದ ಶಾಸನವೊಂದರಲ್ಲಿ ಇದನ್ನು 'ಮಹಾಭಿಷೇಕ'ವೆಂದು ಕರೆದು ಇದಕ್ಕೆ ಬೇಕಾಗುವ ಹಾಲು ಮೊಸರುಗಳನ್ನು ಒದಗಿಸುವವರಿಗೆ ಸಲ್ಲಬೇಕಾದ ಹಣದ ವಿವರಗಳನ್ನೂ ಕೊಟ್ಟಿದೆ.

ಪಂಚಬಾಣ ಕವಿಯ 'ಭುಜಬಲಿ ಚರಿತೆ'ಯ ಪ್ರಸ್ತಾಪ ಆಗಲೇ ಗುಳ್ಳಕಾಯಜ್ಜಿ ಕಥೆಯ ಸಂದರ್ಭದಲ್ಲಿ ಬಂದಿತಷ್ಟೆ. ಇದು ಹದಿನೇಳನೆಯ ಶತಮಾನದ ಕೃತಿ. ಇದರಲ್ಲಿ ಶಾಂತವರ್ಣಿಯೆಂಬಾತ ಕ್ರಿಸ್ತಾಬ್ದ 1612ರಲ್ಲಿ ಗೊಮ್ಮಟಸ್ವಾಮಿಗೆ ಮಸ್ತಕಾಭಿಷೇಕ ಮಾಡಿಸಿದನೆಂಬ ವಿವರವಿದೆ. 1677ರಲ್ಲಿ ಇನ್ನೊಂದು ಮಸ್ತಕಾಭಿಷೇಕವಾಯಿತೆಂದು ದಾಖಲೆಯಿದೆ. ಇದನ್ನು ಅನಂತ ಕವಿಯೆಂಬುವನು ತಾನು ಬರೆದ 'ಗೊಮ್ಮಟೇಶ್ವರ ಚರಿತ್ರೆ' (ಸುಮಾರು 1780ರಲ್ಲಿ) ಯೆಂಬ ಕೃತಿಯಲ್ಲಿ ಪ್ರಸ್ತಾಪಿಸಿದ್ದಾನೆ. ಮೈಸೂರಿನ ಅರಸರಾಗಿದ್ದ ಚಿಕ್ಕದೇವರಾಜ ಒಡೆಯರು ಆಡಳಿತ ನಡೆಸುತ್ತಿದ್ದಾಗ ಅವರ ಬಳಿ ವಿಶಾಲಾಕ್ಷ ಪಂಡಿತನೆಂಬ ಮಂತ್ರಿಯಿದ್ದ ; ಇವನು ಜೈನ. ಇವನು ಬಹು ವೆಚ್ಚಮಾಡಿ ವೈಭವದಿಂದ ಗೊಮ್ಮಟೇಶ್ವರನಿಗೆ ಮಹಾಮಸ್ತಕಾಭಿಷೇಕ ಮಾಡಿಸಿದನಂತೆ.

ಇನ್ನೂ ಒಂದು ಬಾರಿ, 1825ರಲ್ಲಿ, ಮಸ್ತಕಾಭಿಷೇಕವಾದುದು ಶಾಂತರಾಜಪಂಡಿತನೆಂಬುವನ ಬರಹದಿಂದ ತಿಳಿದುಬರುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಹೆಸರು ನೀವು ಕೇಳಿದ್ದೀರಲ್ಲವೆ ? ಮೈಸೂರು ಅರಸರಲ್ಲಿ ಪ್ರಸಿದ್ಧರಾದವರು. ಇವರ ಕಾಲದಲ್ಲಿ ನಡೆದ ಮಸ್ತಕಾಭಿಷೇಕ ಇದು. ಇವರೇ ಮಾಡಿಸಿದುದು.

ಹೀಗೆಯೇ 1827, 1871, 1887, 1900, 1910, 1925, 1940, 1953 ಈ ವರ್ಷಗಳಲ್ಲೆಲ್ಲ ಗೊಮ್ಮಟೇಶ್ವರನಿಗೆ ಮಸ್ತಕಾಭಿಷೇಕಗಳಾದ ದಾಖಲೆಗಳಿವೆ. ನಮ್ಮ ಕಾಲದಲ್ಲಿಯೇ ನಡೆದುದೆಂದರೆ 1967ರಲ್ಲಿ. 1887ರಲ್ಲಿ ನಡೆದ ಮಸ್ತಕಾಭಿಷೇಕ ಕೊಲ್ಹಾಪುರದ ಜೈನ ಸ್ವಾಮಿಗಳೊಬ್ಬರು ನಡೆಸಿದುದೆಂದೂ, ಅದಕ್ಕೆ ಮೂವತ್ತು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚು ಹಣ ವೆಚ್ಚವಾಯಿತೆಂದೂ ತಿಳಿದುಬರುತ್ತದೆ.

ಮಸ್ತಕಾಭಿಷೇಕ ಹೇಗೆ ನಡೆಯುತ್ತದೆ ? ಆಗ ಏನೇನು ಮಾಡುತ್ತಾರೆ ?

ಮೇಲೆ ಹೇಳಿದ 1887ರ ಮಸ್ತಕಾಭಿಷೇಕವನ್ನು ಕುರಿತು ಒಂದು ಸ್ವಾರಸ್ಯವಾದ ನಿರೂಪಣೆ ಉಳಿದುಬಂದಿದೆ. ಎಂಭತ್ತೆಂಟು ವರ್ಷಗಳಿಗೂ ಹಿಂದೆ ಹೇಗೆ ನಡೆಯಿತು ಎನ್ನುವುದು ಸ್ವಾರಸ್ಯವಲ್ಲವೆ ? ಅದರ ವಿವರಗಳು ಹೀಗೆ:

"ಅಂದು ಮಾರ್ಚಿ ತಿಂಗಳ 14ನೇ ತಾರೀಖು. ದೇಶದ ಎಲ್ಲ ಭಾಗಗಳಿಂದ ಸುಮಾರು ಇಪ್ಪತ್ತು ಸಾವಿರ ಜನ ಸೇರಿದ್ದರು. ಗುಂಪಿನಲ್ಲಿ ಬಂಗಾಳಿಗಳಿದ್ದರು, ಗುಜರಾತಿಗಳಿದ್ದರು, ತಮಿಳರಿದ್ದರು, ಕನ್ನಡಿಗರಂತೂ ಸರಿಯೇ ಸರಿ. ಕೆಲವರು ಒಂದು ತಿಂಗಳ ಮೊದಲೇ ಇಲ್ಲಿಗೆ ಬಂದುಬಿಟ್ಟಿದ್ದರು. ಏಕೆಂದರೆ ಮಸ್ತಕಾಭಿಷೇಕದ ದಿನಕ್ಕೆ ಒಂದು ತಿಂಗಳ ಮೊದಲಿನಿಂದಲೂ ಗೊಮ್ಮಟೇಶ್ವರನಿಗೆ ದಿನವೂ ಅರ್ಚನೆಗಳು ನಡೆಯುತ್ತಿದ್ದುವು, ಪಾದಪೂಜೆಯೂ ನಡೆಯುತ್ತಿದ್ದಿತು. ಅಂದು ಎಂದರೆ 14ನೆಯ ತಾರೀಖು, ಮುಂಜಾನೆಯಿಂದಲೇ ಜನ ದೊಡ್ಡಬೆಟ್ಟವನ್ನು ಏರತೊಡಗಿದರು. ಹೆಂಗಸರೂ ಮಕ್ಕಳೂ ಮುದುಕರೂ ಇದರಲ್ಲಿ ಯುವಕರಂತೆಯೇ ಸೇರಿದ್ದರು. ಎಲ್ಲರೂ ಸ್ನಾನ ಮಾಡಿ ಮಡಿಯುಟ್ಟಿದ್ದರು. ಬಣ್ಣ ಬಣ್ಣದ ಬಟ್ಟೆಗಳನ್ನುಟ್ಟು, ಬೆಲೆ ಬಾಳುವ ಒಡವೆಗಳನ್ನು ಧರಿಸಿ ಎಲ್ಲರೂ ಉತ್ಸಾಹದಿಂದಿದ್ದರು. ಅಭಿಷೇಕವನ್ನು ನೋಡಲು ಸರಿಯಾದ ಸ್ಥಳವನ್ನು ಹಿಡಿಯಬೇಕೆಂದು ಎಲ್ಲರಿಗೂ ಕುತೂಹಲ. ಈ ಗುಂಪಿನಲ್ಲಿ ಹಲವರು ಸೇವಾಕರ್ತರು. ಅಭಿಷೇಕಕ್ಕೆ ನೀರನ್ನು ತಾಮ್ರದ ಕೊಡಗಳಲ್ಲಿ, ಹಿತ್ತಾಳೆ ಕೊಡಗಳಲ್ಲಿ, ಗಡಿಗೆಗಳಲ್ಲಿ ಹೊತ್ತು ಮೇಲೆ ಬರುತ್ತಿದ್ದರು. ಸುಮಾರು ಹತ್ತು ಗಂಟೆಯ ವೇಳೆಗೆ ಬೆಟ್ಟದ ಮೇಲೆ ಒಂದಿಷ್ಟು ಸ್ಥಳವಿಲ್ಲದಂತೆ ಆಗಿಬಿಟ್ಟಿತು. ಗೊಮ್ಮಟೇಶ್ವರ ಬಿಂಬದ ಆವರಣದಲ್ಲಂತೂ ಜನಸಂದಣಿ ಹೇಳತೀರದು.

"ಅಭಿಷೇಕ ನಡೆಸಲು ಪುರೋಹಿತರು ಗೊಮ್ಮಟೇಶ್ವರನ ತಲೆಯವರೆಗೂ ಹತ್ತಿಹೋಗುವುದು ಹೇಗೆ ? ಅದಕ್ಕಾಗಿ ಮೂರ್ತಿಯ ಹಿಂಭಾಗ ಮತ್ತು ಎರಡೂ ಪಕ್ಕಗಳಲ್ಲಿ ಬೊಂಬಿನ ಅಟ್ಟಣಿಗೆಗಳನ್ನು ಕಟ್ಟಿ, ಪುರೋಹಿತರು ನೂರಾರು ಮಂದಿ ಈ ಅಟ್ಟಣಿಗೆಗಳ ಮೇಲೆ ನಿಂತಿದ್ದರು. ಗೊಮ್ಮಟೇಶ್ವರನ ಮುಂಭಾಗದಲ್ಲಿ ಸುಮಾರು ನಲವತ್ತು ಚದರ ಅಡಿ ಸ್ಥಳದಲ್ಲಿ ಒಂದು ಸಾವಿರದ ಎಂಟು ಕಳಶಗಳನ್ನು ನೀರುತುಂಬಿ ಇರಿಸಿದ್ದರು. ಇವೆಲ್ಲವೂ ಮಣ್ಣಿನ ಗಡಿಗೆಗಳೇ, ಆದರೆ ಬಣ್ಣಗಳಿಂದ ಸುಂದರವಾದ ವಿನ್ಯಾಸಗಳಲ್ಲಿ ಅಲಂಕರಿಸಿದ್ದರು. ಒಂದೊಂದರ ಮೇಲೂ ಮಾವಿನ ಎಲೆಗಳು, ತೆಂಗಿನಕಾಯಿ. ಕಳಶ

ಗಳೆಲ್ಲವನ್ನೂ ಪವಿತ್ರಸೂತ್ರದಿಂದ ಕಟ್ಟಿದ್ದರು. ಅಟ್ಟಣಿಗೆಗಳ ಮೇಲೆ ನಿಂತ ಪುರೋಹಿತರ ಕೈಗಳಲ್ಲಿಯೂ ಕೊಡಗಳು; ಇವುಗಳಲ್ಲಿ ಪಂಚಾಮೃತ ಅಭಿಷೇಕಕ್ಕೆ ಬೇಕಾಗುವ ಹಾಲು, ತುಪ್ಪ, ಮೊಸರು ಮೊದಲಾದ ಪದಾರ್ಥಗಳನ್ನು ತುಂಬಿದ್ದರು.

"ಮಸ್ತಕಾಭಿಷೇಕಕ್ಕೆ ಜ್ಯೋತಿಷ್ಕರು ಶುಭಮುಹೂರ್ತವನ್ನು ಮೊದಲೇ ಗೊತ್ತುಮಾಡಿದ್ದರು. ಆ ಮುಹೂರ್ತಕ್ಕೆ ಸರಿಯಾಗಿ ಕೊಲ್ಹಾಪುರದ ಸ್ವಾಮಿಗಳು, ಇವರೇ ಮಸ್ತಕಾಭಿಷೇಕವನ್ನು ನಡೆಯಿಸಿದವರು, ಅಭಿಷೇಕ ಆಗಲೆಂದು ಅಪ್ಪಣೆಕೊಡಿಸಿದರು. ಒಡನೆಯೇ ಅಟ್ಟಣಿಗೆಗಳ ಮೇಲೆ ಮಂತ್ರಗಳನ್ನು ಹೇಳುತ್ತ ನಿಂತಿದ್ದ ನೂರಾರು ಪುರೋಹಿತರು ಗೊಮ್ಮಟ ಮೂರ್ತಿಯ ಮೇಲೆ ಪಂಚಾಮೃತ ಅಭಿಷೇಕವನ್ನು ಒಮ್ಮೆಲೆ ಮಾಡಿದರು. ಮೂರ್ತಿಯ ಮುಂದೆ ಇರಿಸಿದ್ದ ಸಾವಿರದ ಎಂಟು ಕಳಶಗಳೂ ಯಕ್ಷಿಣಿಯಿಂದೆಂಬಂತೆ ನೆಲದ ಮೇಲಿಂದ ಅಟ್ಟಣಿಗೆಗೆ ಹೋದುವು; ಅಲ್ಲಿಂದ ಗೊಮ್ಮಟ ಬಿಂಬದ ಮೇಲೆ ನೀರನ್ನು ಸುರಿದುವು, ನೆರೆದಿದ್ದ ಜನರು 'ಜಯ ಜಯ', 'ಅಹಹ ಅಹಹ' ಎಂದು ಕೂಗುತ್ತ ತಮ್ಮ ಸಂತೋಷವನ್ನು ಸಮಾಧಾನವನ್ನೂ ಆಶ್ಚರ್ಯವನ್ನೂ ಸೂಚಿಸಿದರು.

"ಪಂಚಾಮೃತ ಸ್ನಾನವಾದ ಮೇಲೆ, ಕಡೆಯ ಅಭಿಷೇಕಕ್ಕೆ ಹದಿನೈದು ಪದಾರ್ಥಗಳನ್ನು ಬಳಸಿದರು: ನೀರು, ಎಳನೀರು, ಬಾಳೆಹಣ್ಣು, ಬೆಲ್ಲ, ತುಪ್ಪ, ಸಕ್ಕರೆ, ಬಾದಾಮಿ, ಖರ್ಜೂರ, ಗೋಡಂಬಿ, ಹಾಲು, ಮೊಸರು, ಚಂದನ, ಬಂಗಾರದ ಹೂಗಳು, ಬೆಳ್ಳಿಯ ಹೂಗಳು, ಬೆಳ್ಳಿಯ ನಾಣ್ಯಗಳು. ಬಂಗಾರ–ಬೆಳ್ಳಿ ಹೂಗಳ ಜೊತೆಗೆ ನವರತ್ನಗಳನ್ನೂ ಮೂರ್ತಿಯ ಮೇಲೆ ಸುರಿಯಲಾಯಿತು."

ಇಷ್ಟು ವೈಭವದಿಂದ ನಡೆಯುವ ಅಭಿಷೇಕವನ್ನು ನೋಡಿದರೆ ಯಾರಿಗೆ ತಾನೆ ಅದ್ಭುತವೆನಿಸುವುದಿಲ್ಲ? ಇದಕ್ಕೆ ಅಪಾರ ಹಣ ವೆಚ್ಚವಾಗುತ್ತದೆ. ಸಾವಿರದ ಎಂಟು ಕಳಶಗಳಿಂದ ಅಭಿಷೇಕ ಮಾಡಲು ಈ ಕಳಶಗಳನ್ನು ಗೊಮ್ಮಟೇಶ್ವರನ ಮುಂದೆ ಇರಿಸಿರುತ್ತಾರಷ್ಟೆ. ಇವನ್ನು ಹರಾಜುಮಾಡುವ ವಾಡಿಕೆಯಿದೆ. ಹೀಗೆ ಮಾಡಿದಾಗ ನೂರಾರು ಶ್ರೀಮಂತರು ನಾನು ತಾನೆಂದು ಮುಂದೆ ಬಂದು ಸಾವಿರಾರು ರೂಪಾಯಿಗಳನ್ನು ಸುರಿದು ಈ ಕಳಶಗಳನ್ನು ಕೊಳ್ಳುತ್ತಾರೆ. ಇಷ್ಟು ಎತ್ತರದ, ಇಷ್ಟು ದೊಡ್ಡ ಪ್ರಮಾಣದ ಮೂರ್ತಿಗೆ ಮಸ್ತಕಾಭಿಷೇಕ ಮಾಡಿಸಲು, ಪಂಚಾಮೃತಾಭಿಷೇಕ

ಮಾಡಿಸಲು ಸಾಮಗ್ರಿಗಳು ಎಷ್ಟು ಪ್ರಮಾಣದ್ದಿರಬೇಕು, ಊಹಿಸಿಕೊಳ್ಳಿ! ಅದನ್ನು ಸಿದ್ಧಪಡಿಸುವ, ಅಭಿಷೇಕಕ್ಕೆ ವ್ಯವಸ್ಥೆ ಮಾಡುವ, ನೆರೆದ ಜನರನ್ನು ಸುಧಾರಿಸುವ ಕೆಲಸವೇನು ಸಾಮಾನ್ಯವಾದುದೇ?

ಮೂರ್ತಿಯೇ ಅದ್ಭುತವಾದುದು; ಅದಕ್ಕೆ ನಡೆಸುವ ಈ ಮಹಾ ಮಸ್ತಕಾಭಿಷೇಕ ಇನ್ನೂ ಅದ್ಭುತವಾದುದೇ! ಹಲವು ವರ್ಷಗಳಿಗೊಮ್ಮೆ ನಡೆಯುವ ಈ ವಿಧಿ, ಈ ಉತ್ಸವ ಸಹಜವಾಗಿಯೇ ತುಂಬ ಸಂಭ್ರಮದಿಂದ ಜರುಗುತ್ತದೆ. ಬೇಕಾದಾಗ ನಡೆಯುವುದಲ್ಲ ಇದು; ವರ್ಷವರ್ಷವೂ ಕಾಣುವುದಲ್ಲ. ಅಲ್ಪ ವ್ಯವಧಾನದಿಂದ ಜರುಗುವುದೂ ಅಲ್ಲ. ಹೀಗೆಂದೇ ಅದರ ವೈಶಿಷ್ಟ್ಯ.

****
**
*